ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 8 ಫೆಬ್ರವರಿ 20, 1983 ಬೆಲೆ 60 ಪೈಸೆ

ಕರ್ನಾಟಕದಲ್ಲಿ

ಸಚಿವ ಸಂಪುಟ ವಿಸ್ತರಣೆ

ರಾಜ್ಯದ ಜನತಾ ಮಂತ್ರಿಮಂಡಲಕ್ಕೆ ಇನ್ನೂ 16 ಮಂದಿ ಹೊಸ ಸಚಿವರುಗಳು ಸೇರ್ಪಡೆಯಾಗಿದ್ದಾರೆ. ಫೆಬ್ರುವರಿ 16 ರಂದು ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ಎಂಟುಮಂದಿ ಕ್ಯಾಬಿನೆಟ್ ದರ್ಜೆಯ ಸಚಿವರೂ ಎಂಟುಮಂದಿ ರಾಜ್ಯ ಸಚಿವರೂ ಪ್ರಮಾಣ ವಚನ ಸ್ವೀಕರಿಸಿದರು. ಆರಂಭದಲ್ಲಿ ಕೇವಲ ಎಂಟು ಮಂದಿಯಿದ್ದ ಸಚಿವ ಸಂಪುಟ ಈಗ 16 ಮಂದಿ ಹೊಸ ಸಚಿವರುಗಳ ಅಧಿಕಾರ ಸ್ವೀಕಾರದಿಂದಾಗಿ 24ಕ್ಕೆ ಏರಿದೆ. ಕ್ಯಾಬಿನೆಟ್ ದರ್ಜೆಯ ಸಚಿವರಾಗಿ ಜೆ. ಹೆಚ್. ಪಟೇಲ್ – ವಿದ್ಯುತ್ ಹಾಗೂ ಅಬಕಾರಿ, ಬಿ. ಎಲ್. ಗೌಡ – ಕೃಷಿ, ಅಜೀಜ್‌ಸೇಟ್ – ಕಾರ್ಮಿಕ ಹಾಗೂ ವಕ್ಫ್, ಆರ್. ಎಲ್. ಜಾಲಪ್ಪ – ಸಹಕಾರ, ವಿಶ್ವನಾಥರೆಡ್ಡಿ – ಪಶುಸಂಗೋಪನೆ, ಪಶುವೈದ್ಯ ಹಾಗೂ ತೋಟಗಾರಿಕೆ, ಎಂ. ಚಂದ್ರಶೇಖರ್ – ನಗರಾಭಿವೃದ್ಧಿ, ಜಿ. ಬಸವಣ್ಣೆಪ್ಪ – ಆಹಾರ ಮತ್ತು ನಾಗರೀಕ ಪೂರೈಕೆ, ಎಂ. ರಘುಪತಿ – ಪ್ರವಾಸೋದ್ಯಮ, ವಾರ್ತಾ ಮತ್ತು ಪ್ರಚಾರ. ಇವರುಗಳು ಪ್ರಮಾಣ ವಚನ ಸ್ವೀಕರಿಸಿದರು.

ಪ್ರಮಾಣ ವಚನ ಸ್ವೀಕರಿಸಿದ ಇತರ ಎಂಟು ಮಂದಿ ರಾಜ್ಯ ಸಚಿವರುಗಳೆಂದರೆ ಜೀವಿಜಯ - ಅರಣ್ಯಖಾತೆ, ಎಂ. ಪಿ. ಪ್ರಕಾಶ - ಸಾರಿಗೆ, ಜೀವರಾಜ್ ಆಳ್ವ – ಯುವಜನಸೇವೆ ಹಾಗೂ ಕ್ರೀಡೆಗಳು, ಪಿ. ಜಿ. ಆರ್. ಸಿಂಧ್ಯ - ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ರಮೇಶ್ ಚಂದಪ್ಪ – ಗೃಹಖಾತೆ, ಆರ್. ಎಸ್. ಲಕ್ಷ್ಮೀಪತಿ – ಸಣ್ಣ ನೀರಾವರಿ ಮತ್ತು ಸಿ. ರಾಜವರ್ಧನ್–ಸಮಾಜ ಕಲ್ಯಾಣ.

ಕ್ರಾಂತಿರಂಗದ ಮಾಜೀ ಅಧ್ಯಕ್ಷರಾಗಿದ್ದ ಹಾಗೂ ಗ್ರಾಮೀಣ ಅಭಿವೃದ್ಧಿ ಸಚಿವರಾದ ಅಬ್ದುಲ್ ನಜೀರ್ ಸಾಬ್ ಅವರು ಕರ್ನಾಟಕ ಜನತಾ ಪಕ್ಷದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಹರಿಹರ :

ಪಾಲಿಫೈಬರ್ ಕಾರ್ಮಿಕರ ಮಹತ್ವದ ಗೆಲುವು

ಬಿರ್ಲಾ ಒಡೆತನದ ಗುತ್ತೇದಾರಿ ಸಂಸ್ಥೆಗಳ ಒಂದು ಘಟಕವಾದ ಹರಿಹರ ಪಾಲಿಫೈಬರ್ ಕಾರ್ಖಾನೆಯಲ್ಲಿ ಎರಡು ಸಾವಿರ ಕಾರ್ಮಿಕರು ಸುಮಾರು 4 ತಿಂಗಳುಗಳಿಂದ ವೇತನ ಹೆಚ್ಚಳ ಮತ್ತಿತರ ಸೌಲಭ್ಯಗಳಿಗಾಗಿ ನಡೆಸುತ್ತಿದ್ದ ಧೀರ ಹೋರಾಟ ಮಹತ್ತ್ವಪೂರ್ಣ ವಿಜಯದಲ್ಲಿ ಕೊನೆಗೊಂಡಿದೆ,

ಆಡಳಿತ ವರ್ಗ ಮತ್ತು ಕಾರ್ಮಿಕ ಸಂಘದ ನಡುವಿನ ಒಪ್ಪಂದಕ್ಕೆ ಸಹಿ ಬಿದ್ದ ಒಡನೆ ಕಾರ್ಮಿಕರು ಹರಿಹರದ ಬೀದಿಗಳಲ್ಲಿ ಉತ್ಸಾಹಪೂರ್ಣ ಮೆರವಣಿಗೆ ನಡೆಸಿದರು. ತಮ್ಮ ನಾಯಕರಾದ, ಸಂಘದ ಅಧ್ಯಕ್ಷರಾದ ಕಾ. ವಿ. ಜೆ. ಕೆ. ನಾಯರ್ ಅವರನ್ನೂ, ಇನ್ನಿತರ ಸಂಘದ ಪದಾಧಿಕಾರಿಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ದು ವಿಜಯೋತ್ಸವವನ್ನು ಆಚರಿಸಿದರು.

ಪಾಲಿಫೈಬರ್ ಕಾರ್ಮಿಕ ಸಂಘವು ಸಿ. ಐ. ಟಿ. ಯು.ಗೆ ಸೇರ್ಪಡೆಯಾಗಿದ್ದರಿಂದ ಕೂಡ ಕಾರ್ಮಿಕರು ಸಿ. ಐ. ಟಿ. ಯು.ಗೆ ಜಯವಾಗಲಿ ಎಂಬ ಘೋಷಣೆಗಳನ್ನು ಕೂಗುತ್ತಿದ್ದರು.

ಹರಿಹರದ ಸಿ. ಪಿ. ಐ. ಆಫೀಸಿನಲ್ಲಿರುವ ಸಂಘದ ಕಚೇರಿಯೊಳಗೂ ಕೂಡ ಸಿ. ಐ. ಟಿ. ಯು. ಜಿಂದಾಬಾದ್ ಘೋಷಣೆಗಳು ಪ್ರತಿಧ್ವನಿಸಿದವು.

ಸ್ಥಳೀಯ ಜನತಾ ಶಾಸಕರಾದ ಶ್ರೀ ಮಲ್ಲಣ್ಣ ಮತ್ತು ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆ ಅವರನ್ನು ಕಾರ್ಮಿಕರು ಶ್ಲಾಘಿಸಿದರು.

ಅಂದು ಸಂಜೆ ಕುಮಾರ ಪಟ್ನದಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಸಂಘದ ಅಧ್ಯಕ್ಷರಾದ ಕಾ. ವಿ. ಜೆ.ಕೆ.ನಾಯರ್, ಉಪಾಧ್ಯಕ್ಷರುಗಳಾದ ಎಂ. ಎಸ್. ಆನಂದರಾವ್ ಮತ್ತು ಬಿ. ಜಿ. ಬಸವರಾಜ್, ಪ್ರಧಾನ ಕಾರ್ಯದರ್ಶಿ ಪಿ. ವಿ. ಚಂದ್ರಶೇಖರ್, ಸಹ ಕಾರ್ಯದರ್ಶಿ ಹೆಚ್.ಕೆ. ಕೊಟ್ರಪ್ಪ ಮತ್ತು ಖಜಾಂಚಿ ಜೆ. ಎಂ. ಮಲ್ಲಿಕಾರ್ಜುನಸ್ವಾಮಿ ಅಲ್ಲದೆ ಕನ್ಸ್‌ಟ್ರಕ್ಷನ್ ವರ್ಕರ್ಸ್ ಯೂನಿಯನ್‌ನ ಕಾ. ಮದಾರ್‌ಸಾಬ್ ಮತ್ತು ಎಸ್. ಪಿ. ನಾಯರ್ ಅವರುಗಳು ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ಹೊಸ ಒಪ್ಪಂದದ ಪ್ರಕಾರ 1326 ಮಂದಿ ಖಾಯಂ ಕಾರ್ಮಿಕರು ತಿಂಗಳೊಂದಕ್ಕೆ 170 ರೂಪಾಯಿಗಳಷ್ಟು ಹೆಚ್ಚಿನ ವೇತನ ಪಡೆಯಲಿದ್ದಾರೆ.

ತುಟ್ಟಿಭತ್ಯೆವು ಒಂದು ಪಾಯಿಂಟಿಗೆ 69.75 ಪೈಸೆಯಿಂದ 1 ರೂಪಾಯಿ 30 ಪೈಸೆಗೆ ಹೆಚ್ಚಲಿದೆ. ಇ.ಎಸ್.ಐ. ಸೌಲಭ್ಯಕ್ಕೆ ಒಳಗಾಗದಿರುವ ನೌಕರರು ವರ್ಷಕ್ಕೆ 600 ರೂಪಾಯಿಗಳಷ್ಟು ವೈದ್ಯಕೀಯ ಸಹಾಯಧನ ಪಡೆಯಲಿದ್ದಾರೆ. ಅಲ್ಲದೆ 7 ದಿನಗಳ ಹೆಚ್ಚಿನ ಸಿಕ್‌ಲೀವ್ ಪಡೆಯಲಿದ್ದಾರೆ. ಕಾರ್ಮಿಕರು ಪಡೆಯಲಿರುವ ಮತ್ತೊಂದು ಮುಖ್ಯ ಸೌಲಭ್ಯವೆಂದರೆ ಉಚಿತ ಕ್ಯಾಂಟೀನ್ ವ್ಯವಸ್ಥೆ. (ಒಪ್ಪಂದದ ಕುರಿತಾದ ಪತ್ರಿಕಾ ಪ್ರಕಟನೆಯ ಪೂರ್ಣ ಪಾಠವನ್ನು ಮುಂದಿನ ವಾರ ಪ್ರಕಟಿಸಲಾಗುತ್ತದೆ.)

ಅಸ್ಸಾಂ ಮತದಾರರ ಮುಂದಿರುವ ಪ್ರಶ್ನೆಗಳು

ಅಸ್ಸಾಂ ಚಳುವಳಿಗಾರರು ಮತ್ತು ಅವರ ಅಖಿಲ ಭಾರತ ಮಟ್ಟದ ಬೆಂಬಲಿಗರು ಚುನಾವಣೆಗೆ ಬಹಿಷ್ಕಾರ ಹಾಕಿರುವುದರಿಂದ, ಸದ್ಯ ನಡೆಯುತ್ತಿರುವ ಚುನಾವಣೆಯಲ್ಲಿ ಆ ರಾಜ್ಯದ ಮತದಾರರು ಕಾಂಗ್ರೆಸ್ ಅಥವ ಆರು ಪಕ್ಷಗಳ ಎಡ ಮತ್ತು ಪ್ರಜಾಪ್ರಭುತ್ವ ರಂಗಗಳಲ್ಲೊಬ್ಬರನ್ನು ಆರಿಸಬೇಕಾಗಿದೆ.

ತಮ್ಮ 17 ಅಂಶಗಳ ಕಾರ್ಯಕ್ರಮದ ತಳಹದಿಯಲ್ಲಿ ಮತಯಾಚನೆ ಮಾಡುತ್ತಿರುವಾಗ ಎಡ ಮತ್ತು ಪ್ರಜಾಪ್ರಭುತ್ವ ರಂಗವು, ಕಾಂಗ್ರೆಸ್ (ಐ) ಮತ್ತು ಬಿಜೆಪಿ–ಜನತಾ ಬೆಂಬಲಿತ ಚಳುವಳಿಗಾರರಿಗಿಂತ ಕೆಲವು ಮುಖ್ಯ ವಿಷಯಗಳ ಕುರಿತು ಯಾವ ರೀತಿ ಭಿನ್ನವಾಗಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಭಾರತ ದೇಶದ ಅವಿಭಾಜ್ಯ ಅಂಗವಾಗಿರುವ ಬಲಿಷ್ಟವಾದ ಕೇಂದ್ರದಡಿಯಲ್ಲಿ ವಿಶಾಲವಾದ ಸ್ವಾಯತ್ತತೆಯನ್ನು ಹೊಂದಿರುವ ರಾಜ್ಯಗಳ ಫೆಡರೇಶನಾಗಿ ಹೊಸ ಸ್ವರೂಪದ ಪ್ರಜಾಪ್ರಭುತ್ವ ಭಾರತ ರಾಜ್ಯವನ್ನು ನಿರ್ಮಿಸಲು ಸಂಯುಕ್ತವಾಗಿ ಪ್ರಯತ್ನಿಸುವ ಅಸ್ಸಾಮಿನ ಜನತೆಯನ್ನು ಎದುರಿಸುತ್ತಿರುವ ಪ್ರಮುಖ ಸಾಮಾಜಿಕ – ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಿಷಯಗಳ ಕುರಿತು ಕಾರ್ಯಕ್ರಮ ವಿಶ್ಲೇಷಿಸುತ್ತದೆ.

ಆರು ಪಕ್ಷಗಳ ರಂಗದ ಕಾರ್ಯಕ್ರಮದಲ್ಲಿ ಒಂದು ಮುಖ್ಯವಾದ ಅಂಶವನ್ನು ಅಂದರೆ "ರಾಜ್ಯಗಳ ಅಧಿಕಾರವನ್ನು ವಿಶಾಲಗೊಳಿಸುವ ದೃಷ್ಟಿಯಿಂದ ಮತ್ತು ಭಾರತ ಯೂನಿಯನ್ನಿನ ಸರಿಸಮಾನ ಭಾಗೀದಾರರಾಗಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸುವಂತೆ ಕೇಂದ್ರ–ರಾಜ್ಯಗಳ ಸಂಬಂಧದಲ್ಲಿ ಬದಲಾವಣೆಯನ್ನುಂಟು ಮಾಡಲಿಕ್ಕೆ ಸರ್ವ ಪ್ರಯತ್ನ ಮಾಡುವ" ದನ್ನೂ ಸೇರಿಸಲಾಗಿದೆ.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು, ಗುಂಪುಗಳು, ಸಂಘಟನೆಗಳೆಲ್ಲ ಇಂಥ ಬೇಡಿಕೆಯನ್ನು ಸದಾಕಾಲ ಒತ್ತಾಯಿಸುತ್ತಾ ಬಂದಿದ್ದಾರೆ. ಕೇಂದ್ರದಲ್ಲಿಯ ಆಳುವ ಪಕ್ಷದ ಅಧಿಕಾರ ಲಾಲಸಿಗರು ಅಷ್ಟೇ ಬಲವಾಗಿ ಅದನ್ನು ವಿರೋಧಿಸುತ್ತ ಬಂದಿರುವುದನ್ನು ನೋಡಿದ್ದೇವೆ. ಈ ಬೇಡಿಕೆಯನ್ನು ಕೇಂದ್ರದಲ್ಲಿಯ ಮುಖಂಡರು ಒಪ್ಪಿಕೊಳ್ಳಲು ನಿರಾಕರಿಸುತ್ತಿರುವುದರಿಂದಲೇ ದೇಶದ ಹಲವಾರು ಕಡೆ ಹಾಗೆಯೇ ಅಸ್ಸಾಂನಲ್ಲಿ ಗಂಭೀರ ಉಂಟಾಗಲು ಕಾರಣವಾಗಿದೆ. ಕೇಂದ್ರ-ರಾಜ್ಯಗಳ ಸಂಬಂಧವನ್ನು ಸುಧಾರಿಸುವುದರಿಂದ ಮಾತ್ರ ಅಸ್ಸಾಂ ಸಮಸ್ಯೆ ಬಗೆಹರಿಯುವುದಿಲ್ಲ. ಒಂದು ರಾಜ್ಯದಲ್ಲಿರುವ ಬೇರೆ ಬೇರೆ ಭಾಷಿಕ, ಗುಂಪುಗಳೊಳಗಿನ ಸಾಮಾಜಿಕ–ಆರ್ಥಿಕ, ರಾಜಕೀಯ ಸಮಸ್ಯೆಗಳನ್ನು ಪರಿಹರಿಸಲು ರಾಜಕೀಯ ಸಂವಿಧಾನಾತ್ಮಕ ಆಯಕಟ್ಟನ್ನೊದಗಿಸುವ ಬಲಿಷ್ಟವಾದ ಭಾರತ ಅತ್ಯಗತ್ಯ. ಆದ್ದರಿಂದ

1) ವಿದೇಶೀಯರ ಸಮಸ್ಯೆಗೆ "ಸಂವಿಧಾನ, ಸಂಬಂಧಪಟ್ಟ ಕ್ಯಾದೆ, ಅಂತರ್ರಾಷ್ಟ್ರೀಯ ಒಪ್ಪಂದಗಳು ಹಾಗೂ ರಾಷ್ಟ್ರೀಯ ನಿಲುಮೆಗಳ" ಆಧಾರದಲ್ಲಿ, ಎಲ್ಲ ವರ್ಗದ ಜನತೆಯ ಸಹಕಾರದಿಂದ ದೀರ್ಘಕಾಲದ ಪರಿಹಾರ ಕಂಡು ಹಿಡಿಯುವುದು.

2) ವಿದೇಶೀಯರು ನುಸುಳಿಬಾರದಂತೆ ಗಡಿ ರಕ್ಷಣೆಯನ್ನು ಬಿಗಿಗೊಳಿಸುವುದು.

3) ಭಾಷಿಕ ಮತ್ತು ಧರ್ಮೀಯ ಅಲ್ಪ ಮತಸ್ಥರಿಗೆ ಪೂರ್ಣ ರಕ್ಷಣೆ. ಸರಿಸಮಾನತೆ ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನೊದಗಿಸುವುದು.

4) ರಾಜ್ಯದಲ್ಲಿರುವ ಬೇರೆ ಬೇರೆ ಜನ ವಿಭಾಗದೊಳಗೆ ಒಳ್ಳೆಯ ಹಾಗೂ ನಿಕಟವಾದ ತಿಳುವಳಿಕೆ ಉಂಟಾಗುವಂತೆ ಮಾಡುವುದು.

5) ಸಾಂಸ್ಕೃತಿಕ ಐಕ್ಯತೆ, ನಿಷ್ಟೆ, ಮತ್ತು ಅಸ್ಸಾಮಿನ ಪರಂಪರೆಯನ್ನು ಉಳಿಸಿಕೊಳ್ಳುವುದು; ಜಾತೀಯ, ವಿಚ್ಛಿದ್ರಕಾರಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ಹೋರಾಡುವುದು.

ಈ ಪ್ರತಿಜ್ಞೆ ಮಾಡಲಾಗಿದೆ.

ಅಸ್ಸಾಂ ಹಾಗೂ ನೈಋತ್ಯ ದಿಕ್ಕಿನಲ್ಲಿರುವ ಭಾಷಿಕ, ಧಾರ್ಮಿಕ ಗುಂಪುಗಳ ಸಮಸ್ಯೆಗಳನ್ನು ಪರಿಹರಿಸಲು ಕಾಂಗ್ರೆಸ್ ಸರಕಾರ ಯಾವ ಕಾನೂನನ್ನಾಗಲಿ, ಸಂವಿಧಾನವನ್ನಾಗಲೀ ಉಪಯೋಗ ಮಾಡಲಿಲ್ಲ. ಈ ಸಮಸ್ಯೆಗಳನ್ನು ಬಗೆಹರಿಸುವ ಬದಲಾಗಿ ವಿಚ್ಛಿದ್ರಕಾರಿ ಶಕ್ತಿಗಳೊ

(8ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ

ವೀರಪ್ಪಮೊಯಿಲಿಯವರ ಮಿಥ್ಯಾಲಾಪ

-ಎನ್ಕೆ

ಅಧಿಕಾರ ಕಳೆದುಕೊಂಡ 60 ದಿವಸಗಳಲ್ಲೇ "ಅಧಿಕಾರ ಗದ್ದುಗೆಯ ಅಮರ ಪ್ರೇಮಕ್ಕೆ" ಅಂಟಿಕೊಂಡ ಕೆಲವು ಮಹಾಶಯರಿಗೆ ಹುಚ್ಚೇ ಹಿಡಿದಂತಾಗುತ್ತದೆ, ನಿದ್ರಾದೇವಿಯಿಂದ ದೂರ ತಳ್ಳಲ್ಪಟ್ಟು ಭಗ್ನ ಶಯನರಾಗಬೇಕಾಗುತ್ತದೆ. ಹನ್ನೊಂದು ವರ್ಷಗಳ ಮೊಗಲ ದರ್ಬಾರ, ಹಿಟ್ಲರನ ಆಳ್ವಿಕೆಯ ರುಚಿ ಕಂಡ ಇಂದಿರಾಗಾಂಧಿಯವರು 1977ರ ಲೋಕಸಭೆ ಚುನಾವಣೆಯಲ್ಲಿ ಮತದಾರರಿಂದ ತುಚ್ಛೀಕರಿಸಲ್ಪಟ್ಟ ನಂತರ ತಲೆಕೆಟ್ಟವರಂತೆ ಪತ್ರಿಕಾ ಹೇಳಿಕೆ ಕೊಡಲಾರಂಭಿಸಿದ್ದರು. ಈಗ ಜನೇವರಿ 5 ರಂದು ಕರ್ನಾಟಕ ಜನರಿಂದ ದೂರೀಕರಿಸಲ್ಪಟ್ಟು ವಿರೋಧಪಕ್ಷದಲ್ಲಿ ಉಳಿಯಬೇಕಾಗಿ ಬಂದ ಇಂದಿರಾ ಚೇಲ ಮಾಜಿ ಆರ್ಥಿಕ ಮಂತ್ರಿ ವೀರಪ್ಪ ಮೊಯಿಲಿಯವರಿಗೂ ಹುಚ್ಚರಾಸ್ಪತ್ರೆಯ ಗಾಳಿ ಬೀಸತೊಡಗಿದಂತೆ ಕಂಡುಬರುತ್ತಿದೆ.

ಕಳೆದ 20ದಿವಸಗಳಲ್ಲಿ (!) ರಾಜ್ಯದ ಹಲವಾರು ಪ್ರದೇಶಗಳಲ್ಲಿ ಪರಿಸ್ಥಿತಿ ಹದಕೆಟ್ಟಿತೆಂದೂ, ಆದರೆ ಅದರ ಪರಿಹಾರಕ್ಕೆ ಹೊಸ ಸರಕಾರ ಯಾವ ಕ್ರಮವನ್ನೂ ಕೈಕೊಂಡಿಲ್ಲೆಂದೂ, ತಾನು ರಾಯಚೂರ, ಚಿತ್ರದುರ್ಗ, ಬಳ್ಳಾರಿ, ತುಮಕೂರು ಜಿಲ್ಲೆಗಳಿಗೆ ಸಂದರ್ಶನವಿತ್ತಾಗ ಕುಡಿಯುವ ನೀರಿನ ಅಭಾವದಿಂದಲೂ, ನಿರುದ್ಯೋಗದಿಂದಲೂ ಜನರು ಸಂಕಷ್ಟಕ್ಕೊಳಗಾಗಿದ್ದಾರೆಂದು ಕಂಡುಬಂತೆಂದೂ, ಬರಗಾಲ ಪರಿಹಾರ ಕಾಮಗಾರಿಗಳ ಪ್ರಾರಂಭಕ್ಕೆ ತಡಮಾಡುವುದು ಸಲ್ಲದೆಂದೂ, ಯುದ್ಧತಳಹದಿಯಲ್ಲಿ ಅದನ್ನು ಪ್ರಾರಂಭಿಸಬೇಕೆಂದೂ ಹೇಳಿದ್ದಾರೆ.

ಮತದಾರರೆಲ್ಲ ಮೊನ್ನೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸಿ ಮೊಯಿಲಿಯಂಥವರಿಗೆ ಮಹದುಪಕಾರ ಮಾಡಿದ್ದಾರೆ. ನಮ್ಮ ರಾಜ್ಯದ ಹೆಚ್ಚಿನ ಹಳ್ಳಿಗಳಲ್ಲಿ ಕುಡಿಯುವ ನೀರಿನಹಾಗೆಯೇ ನಿರುದ್ಯೋಗಿಗಳ ಸಮಸ್ಯೆ ಇದೆ ಎಂಬ ವಿಷಯ ತಿಳಿಯಲು ವೀರಪ್ಪ ಮೊಯಿಲಿಯವರಿಗೆ ತಮ್ಮ ಪಕ್ಷ ಅಧಿಕಾರ ಕಳೆದುಕೊಳ್ಳುವುದೇ ಬೇಕಾಗಿದ್ದಂತೆ ಕಂಡುಬರುತ್ತದೆ. ಗುಂಡೂರಾವ್–ವೀರಪ್ಪ ಮೊಯಿಲಿಯವರು ಮೂರು ವರ್ಷ ಆಡಳಿತ ನಡೆಸಿದ ಕಾಲಾವಧಿಯಲ್ಲಿ ವಿಧಾನ ಸೌಧದ ಅರ್ಜಿಗಳ ಫೈಲನ್ನು ತೆಗೆದು ನೋಡಿದರೆ ಅದರಲ್ಲಿ ಅರ್ಧದಷ್ಟು ಗ್ರಾಮಾಂತರಪ್ರದೇಶದ ಜನರ ನೀರು, ಉದ್ಯೋಗ, ರಸ್ತೆ, ಭೂ ಸಮಸ್ಯೆ, ಗೃಹನಿರ್ಮಾಣ, ಗೃಹಕೈಗಾರಿಕೆ, ಹರಿಜನ–ಗಿರಿಜನರ ಸಮಸ್ಯೆಗಳಿಗೆ ಸಂಬಂಧಪಟ್ಟವೆಯೆಂದು ಸಾಕ್ಷ್ಯ ನೀಡುತ್ತಿವೆ. ಮಂತ್ರಿಯಾಗಿದ್ದಾಗ ಪಾಪ! ಆಗಿನ ಆರ್ಥಿಕ ಮಂತ್ರಿ ಮೊಯಿಲಿಯವರಿಗೂ ಮುಖ್ಯಮಂತ್ರಿ ಗುಂಡೂರಾಯರಿಗೂ ಹಾಗೆಯೇ ಇವರ ಮಂತ್ರಿಸಂಗಾತಿಗಳಿಗೂ ಜನರ ಮನವಿ ಅರ್ಜಿಗಳನ್ನು ಓದಿ ನೋಡಲಿಕ್ಕೂ, ಜನರಿಂದ ಕೇಳಿ ತಿಳಿದುಕೊಳ್ಳಲಿಕ್ಕೂ ಪುರುಸೊತ್ತೇ ಇರಲಿಲ್ಲ. ಈ ಮಹಾಶಯರು ಅಧಿಕಾರದಲ್ಲಿದ್ದಾಗ ಬಹುಶಃ ಇವರ "ಕೆಂಪಾದ" ಕಣ್ಣುಗಳಿಗೆಲ್ಲ ಎಲ್ಲ ಹಳ್ಳಿಗಳಲ್ಲೂ ಸಮೃದ್ಧ ಕುಡಿಯುವ ನೀರೇ ನೀರು, ಯುವಕರಿಗೂ ಮುದುಕರಿಗೂ ಉದ್ಯೋಗವೇ ಉದ್ಯೋಗ, ಊರು ತುಂಬ ಬರಗಾಲ ಕಾಮಗಾರಿಗಳೇ ಕಂಡುಬರುತ್ತಿದ್ದವು. ಜನೇವರಿ 10 ರಂದು ರಾಮಕೃಷ್ಣ ಹೆಗಡೆಯವರ ಪ್ರತಿಜ್ಞಾ ವಿಧಿಯಾದ ತಕ್ಷಣ ಗುಂಡೂರಾವ್ ಯುಗದಮಹಾ ಕೃತಿಗಳೆಲ್ಲ ಮಂಗಮಾಯವಾದಂತೆ ಕಂಡುಬರುತ್ತದಲ್ಲ. ಇದೆಂಥ ಅದ್ಭುತ ಜಾದು ಪ್ರದರ್ಶನ. ಅಂತೂ ಜನರ ಸಂಘರ್ಷ ಬೆಳೆಸಲು, ಅವರ ಬೇಡಿಕೆಗಳ ಪರವಾಗಿ ವಾದಿಸಲು ಮೊಯಿಲಿಯಂಥವರಿಗೆ ಜನತೆ ಅವಕಾಶ ಮಾಡಿಕೊಟ್ಟಿರುವುದು ನಿಜವಾಗಿಯೂ ಸ್ವಾಗತಾರ್ಹ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ದುರಾಡಳಿತ

ಕಾಂಗ್ರೆಸ್ ಆಡಳಿತೆಯಲ್ಲಿ ಪ್ರತಿಯೊಂದು ಪ್ರಾಧಿಕಾರಗಳಲ್ಲೂ ಹೊಲಸು ಸಮೃದ್ಧಿಯಾಗಿ ತುಂಬಿಕೊಂಡಿದೆಂಬ ಆರೋಪಗಳನ್ನು ಈ ಹಿಂದೆಯೇ ಕೇಳುತ್ತ ಬಂದಿದ್ದೇವೆ. ಕಿವುಡು ಸರಕಾರಕ್ಕೆ ಮಾತ್ರ ಆ ಕೂಗು ಕೇಳಿಸುತ್ತಿದ್ದಿಲ್ಲ. ಕೇಳಿಸುವಂತೆ ಮಾಡುವ ಶಕ್ತಿಯೂ ಜನರಲ್ಲಿರಲಿಲ್ಲ. ಕೆ. ಕೆ. ಮೂರ್ತಿಯವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದಾಗಲೇ, ಅವರ ಹಿಂದಿನ ಚರಿತ್ರೆ, ಅವರ ಕೆಲಸದ ವೈಖರಿಗಳ ಕುರಿತು ಬರೆದಿದ್ದೆವು. "ಯಥಾ ರಾಜಾ ತಥಾ ಅಧಿಕಾರಿ, ತಥಾ ಚೆರ್ಮನ್" ಗುಂಡೂರಾವ್ ಅಧಿಕಾರದ ವೈಖರಿಯಂತೆಯೇ ಮೂರ್ತಿ ಆಡಳಿತ ನಡೆಸಿಕೊಂಡು ಹೋದರು. ನಿವೇಶನಕ್ಕಾಗಿ ಅರ್ಜಿ ಸಲ್ಲಿಸುವವರಿಂದ ಅರ್ಜಿಪ್ರತಿಗಾಗಿ ಹಣ ಮುಂಗಡ ಡಿಪಾಜಿಟ್ ಮುಂತಾದ ಅರ್ಜಿದಾರರಿಗೆ ಭಾರವಾದ, ಆತಂಕಕರವಾದ ನಿಯಮಗಳನ್ನು ಮೂರ್ತಿಯವರು ಅನುಷ್ಠಾನದಲ್ಲಿ ತಂದರು. ಅರ್ಜಿಗಳ ಮಂಜೂರಾತಿಗೆ ತಿಂಗಳ ಮಿತಿಯಿಲ್ಲ. ಅರ್ಜಿದಾರರು ಸಂದಾಯ ಮಾಡಿದ ಅರ್ಜಿಯ ಹಣ, ಡಿಪಾಜಿಟ್‌ಗಳೆಲ್ಲ ಪ್ರಾಧಿಕಾರದ ಆಡಳಿತ ಖರ್ಚಿಗಾಗಿ ಜನರ ಕಿಸೆ ಸೇರುವಂತಿಲ್ಲ. ಅರ್ಜಿ ಸಲ್ಲಿಸಿ ಹಲವಾರು ವರ್ಷಗಳಿಂದ ಪ್ರತಿಫಲದ ದಾರಿ ನೋಡುವವರೇ ಬಹಳ ಜನ. ಸಾಲಾಗಿ ನಿಂತು ಅರ್ಜಿ ಪ್ರತಿ ಪಡೆಯಲು ಕಾಲು ನೋಯಿಸಿಕೊಳ್ಳದ ಕಷ್ಟಪಡದವರಿಗೆ ಮಾತ್ರ ನಿವೇಶನಗಳ ಮಂಜೂರಾತಿ. ಇಂಥ ಆಡಳಿತೆಯ ವೈಖರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ್ದಾಗಿತ್ತು.

ಈಗ ಶಾಸಕ ರಾಮದೇವ ಅವರು ಪ್ರಾಧಿಕಾರದ ದುರಾಡಳಿತೆಯ ಸ್ಪಷ್ಟ ಚಿತ್ರವನ್ನು ಬಹಿರಂಗಪಡಿಸಿದ್ದಾರೆ. ಮಂತ್ರಿ ಲಕ್ಷ್ಮೀಸಾಗರ ಅವರ ಹೆಸರೂ ಸೇರಿಕೊಂಡಿದೆ. ತಾವು ಅರ್ಜಿಯನ್ನೇ ಸಲ್ಲಿಸಿಲ್ಲೆಂದು ಅವರು ಹೇಳಿದ್ದಾರೆ. ಆದರೆ ಅವರ ಸಹಿಯಿಲ್ಲದ ಚಲನ್ ಮೂಲಕ ಬ್ಯಾಂಕಿನಲ್ಲಿ ಹಣ ಸಂದಾಯವಾಗಿದೆ. ಹಾಗೆಯೇ ಹಲವಾರು ವಿ.ಐ.ಪಿ. (ಅತಿ ಮುಖ್ಯವ್ಯಕ್ತಿಗಳು) ಅದರಲ್ಲಿ ಸಿಲುಕಿಕೊಂಡಿದ್ದಾರೆ.

ಪ್ರತಿಯೊಂದು ಆಡಳಿತೆಯನ್ನು ಸ್ವಚ್ಛ ಮಾಡುವುದು ಸುಲಭದ ಕೆಲಸವಲ್ಲ. ಆದರೆ ಬೆಂಗಳೂರು ನಗರದಲ್ಲಿ ನಿವೇಶನಗಳಿಲ್ಲದ ಜನರ ಸಂಖ್ಯೆ ಅತಿ ದೊಡ್ಡದು. ಈ ಸಮಸ್ಯೆಯ ಪರಿಹಾರಕ್ಕೆ ಆದ್ಯಗಮನ ನೀಡುವುದು ಅತ್ಯಗತ್ಯ.

ಈಗ್ಗೆ ಪ್ರಾಧಿಕಾರಕ್ಕೆ ಹೊಸ ಅಧ್ಯಕ್ಷರನ್ನು ನೇಮಿಸಲಾಗಿದೆ. ಶಾಸಕ ರಾಮದೇವ ಅವರೂ ಕೂಡ ಪ್ರಾಧಿಕಾರದ ದುರಾಡಳಿತೆಯ ಕೆಲವಂಶಗಳನ್ನು ಬಯಲಿಗೆಳೆದಿದ್ದಾರೆ. ಹೊಸ ಅಧ್ಯಕ್ಷರು ಆಡಳಿತೆಯನ್ನು ಸರಿಪಡಿಸುವುದರ ಜೊತೆಯಲ್ಲಿಯೇ, ರಾಮದೇವ ಅವರು ಬಹಿರಂಗಗೊಳಿಸಿರುವ ವಿಷಯಗಳ ಕುರಿತು ಸರಿಯಾದ ವಿಚಾರಣೆ ನಡೆಸುವುದು ಅತ್ಯಗತ್ಯ. ರಾಮದೇವ ಅವರ ನೇತೃತ್ವದಲ್ಲಿ ಮಾತ್ರ ವಿಚಾರಣೆ ನಡೆಯುವುದು ಬೇಡವೆಂದು ಮಾಜಿ ಅಧ್ಯಕ್ಷ ಮೂರ್ತಿಯವರು ಹೇಳಿದ್ದಾರೆ. ಬೇರೆಯವರಿಂದ ವಿಚಾರಣೆ ಎದುರಿಸಲು ಸಿದ್ಧವೆಂದು ಸಾರಿದ್ದಾರೆ. ಇದರರ್ಥವೇನೆಂಬುದನ್ನು ಮೂರ್ತಿಯವರೇ ಹೇಳಬೇಕು.

ಇಂಥ ಪರಿಸ್ಥಿತಿಯಲ್ಲಿ ರಾಮದೇವ ಅವರ ನೇತೃತ್ವದಲ್ಲಾಗಲೀ, ಅಥವಾ ನಿಷ್ಪಾವಂತ ಮತ್ತೊಬ್ಬ ಅಧಿಕಾರಿಯ ನೇತೃತ್ವದಲ್ಲಾಗಲೀ ಕೂಡಲೇ ವಿಚಾರಣಾ ಆಯೋಗ ನೇಮಿಸುವುದು ಅತ್ಯಗತ್ಯ. ತಪ್ಪಿತಸ್ಥರ ಮೇಲೆ ಕಠಿಣ ಕ್ರಮಕೈಗೊಳ್ಳುವುದೂ ಅಷ್ಟೆ ಅವಶ್ಯವೆಂದು ಹೇಳಬೇಕಾಗುತ್ತದೆ.

ಕಾವೇರಿ ನೀರಿನ ಸಮಸ್ಯೆ

ಕಳೆದ 6–7 ವರ್ಷಗಳಿಂದ ತಮಿಳುನಾಡು ಸರಕಾರ ಕರ್ನಾಟಕ ಸರಕಾರದ ವಿರುದ್ಧ ವೃಥಾ ಆರೋಪ ಮಾಡುತ್ತಲೇ ಬರುತ್ತಿದೆ. ತಮಿಳುನಾಡಿನಲ್ಲಿರುವ ಕಾವೇರಿ ನದಿಯ ಆಯಕಟ್ಟಿನ ಪ್ರದೇಶದಲ್ಲಿ ಬೇಸಿಗೆಯ ಭತ್ತದಬೆಳೆಗೆ ಸಾಕಾಗುವಷ್ಟು ನೀರನ್ನು ಕರ್ನಾಟಕ ಸರ್ಕಾರ ಬಿಡುಗಡೆ ಮಾಡುತ್ತಿಲ್ಲ. ಆ ಕಾರಣದಿಂದ ಸಾವಿರಾರು ಎಕರೆ ಪ್ರದೇಶದಲ್ಲಿಯ ಭತ್ತದ ಬೆಳೆ ಒಣಗುತ್ತದೆಂದು ಅವರ ರಾಜ್ಯಗಳೊಳಗೆ 1924ರ ಕಾವೇರಿ ನೀರಿನ ಹಂಚಿಕೆಯ ಕುರಿತಾದ ಒಪ್ಪಂದವನ್ನು ಪ್ರತಿಪಾದಿಸುತ್ತಿದ್ದಾರೆ. ಮತ್ತೊಂದು ಒಪ್ಪಂದವಾಗುವತನಕ ಹಳೇ ಕರಾರಿನಂತೆಯೇ ನೀರು ಬಿಡಬೇಕಾಗಿದೆಯೆಂದು ಅವರ ವಾದ.

ನಮ್ಮ ದೇಶದ ಹಲವಾರು ರಾಜ್ಯಗಳಲ್ಲಿ ಪಂಜಾಬು, ಹರಿಯಾಣ, ರಾಜಸ್ತಾನ, ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಹಾಗೆಯೇ ಇನ್ನಿತರ ರಾಜ್ಯಗಳ ಮಧ್ಯೆ ನದಿ ನೀರಿನ ಹಂಚಿಕೆಗಾಗಿ ತಕರಾರು ನಡೆಯುತ್ತಲೇ ಇದೆ. ಪಂಜಾಬಿನಲ್ಲಿ ನಡೆದಿರುವ ಅಕಾಲಿಗಳ ಚಳುವಳಿಯಲ್ಲಿ ಕೂಡ ನದಿ ನೀರಿನ ಹಂಚಿಕೆಯು ಒಂದಾಗಿದೆ.

ಆಗಿನ ಮೈಸೂರು ಸಂಸ್ಥಾನ, ಮದ್ರಾಸು ಮತ್ತು ಕೇರಳ ಸರಕಾರಗಳು 1924ರಲ್ಲಿ ಅಂದರೆ 59 ವರ್ಷಗಳ ಹಿಂದೆ ಕಾವೇರಿ ನೀರಿನ ಉಪಯೋಗದ ಕುರಿತು ಒಂದು ಒಪ್ಪಂದ ಮಾಡಿಕೊಂಡಿದ್ದರು. ಅಂದಿನಿಂದ ಇಂದಿನವರೆಗೆ ಸಾಕಷ್ಟು ಕಾವೇರಿ ನೀರು ಹರಿದಿದೆ. ಅದರಂತೆಯೇ ಇತರ ಅಂತರ ರಾಜ್ಯಗಳೊಳಗೆ ಹರಿಯುತ್ತಿರುವ ಕೃಷ್ಣಾ, ಗೋದಾವರಿ, ಭೀಮಾ, ಸಟಲೇಜ, ಬೀಸ್, ತುಂಗಭದ್ರಾ ನದಿಗಳ ನೀರೂ ಹರಿದಿವೆ.

35 ವರ್ಷಗಳ ಕಾಂಗ್ರೆಸ್ ಆಡಳಿತೆಯಲ್ಲಿ ಈ ಇಡೀ ದೇಶಕ್ಕೆ ಅತಿ ಮುಖ್ಯವಾದ ಹಾಗೆಯೇ ರಾಜ್ಯಗಳ ನೀರಾವರಿ ಕುಡಿಯುವ ನೀರು ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗೆ ನೇರವಾಗಿ ಸಂಬಂಧಪಟ್ಟಂಥಾ ಅಂತರ ರಾಜ್ಯಗಳಲ್ಲಿ ಹರಿಯುತ್ತಿರುವ ದೊಡ್ಡ ನದಿಗಳ ನೀರು ಹಂಚುವ ಸಮಸ್ಯೆಯನ್ನು ಗಂಭೀರವಾಗಿ ವಿಚಾರ ಮಾಡಿರುವುದಿಲ್ಲ. ಕಾವೇರಿ, ಕೃಷ್ಣಾ, ಗೋದಾವರಿ, ತುಂಗಭದ್ರಾ ಮೊದಲಾದ ನದಿಗಳ ನೀರಿನ ಹಂಚಿಕೆಯಾಗಿರುವುದು ಬ್ರಿಟಿಷರ ಕಾಲದಲ್ಲಿ. ಅವುಗಳ ಪುನರ್ವಿಚಾರ ಅತ್ಯಗತ್ಯ. ಮಳೆಯ ಅಭಾವದಿಂದಾಗಿ ಒಟ್ಟು ನೀರು ಹರಿಯುವುದು ಕಡಿಮೆಯಾಗಿದೆ. ಆಯಾ ರಾಜ್ಯಗಳು, ಜನತೆಯ ಆಶೋತ್ತರಗಳನ್ನು ಪೂರೈಸಲು ಹಲವಾರು ಯೋಜನೆಗಳನ್ನು ಕೈಗೊಂಡಿವೆ, ಮುಂದೆಯೂ ಕೈಗೊಳ್ಳಬೇಕಾದೀತು. ಒಕ್ಕಲತನ, ಕೈಗಾರಿಕೆ, ಜನರ ಬಳಕೆಗೆ ಹೆಚ್ಚು ನೀರಿನ ಅವಶ್ಯಕತೆಯೂ ದೈನಂದಿನ ಅಧಿಕವಾಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ನದಿ ನೀರಿನ ಮೇಲೆಯೇ ಅವಲಂಬಿಸುವುದು ಸರಿಯಲ್ಲ. ಹಳೇ ಒಪ್ಪಂದಗಳ ಪುನರ್ವಿಮರ್ಶೆ ಆಗಲೇಬೇಕು. ಆದರೆ ಅದರ ಜೊತೆಯಲ್ಲೇ ತಮಿಳುನಾಡಿನಂತ ರಾಜ್ಯಗಳು ಕಾವೇರಿ ನದಿ ದಂಡೆಯ ಬಯಲು ಪ್ರದೇಶದಲ್ಲಿ ಪಂಜಾಬಿನ ರೈತರು ಮಾಡಿತೆಂದ ಹೆಚ್ಚಾಗಿ ಕೊಳವೆ ಬಾವಿಗಳ ಮೇಲೆ ಅವಲಂಬಿಸುವುದು ಅತ್ಯಗತ್ಯ. ಹಾಗೆಯೇ ಕಾವೇರಿ ನದಿನೀರನ್ನೇ ಅವಲಂಬಿಸದೆ, ಕೊಳವೆ ಭಾವಿ, ಕೆರೆಗಳ ವ್ಯವಸ್ಥೆ ಮಾಡಿಕೊಂಡು, ಉಪಯೋಗವಾಗದಿರುವ ಭೂ ಗರ್ಭದ ನೀರನ್ನು ಭತ್ತದ ಬೆಳೆಗೆ ಉಪಯೋಗಿಸುವುದು ಅತ್ಯಗತ್ಯ.

ವಿಜ್ಞಾನ ಬಹಳಷ್ಟು ಮುಂದುವರಿದಿದೆ. ಆಕಾಶದತ್ತ ಹಾರಾಡಲು ಅದನ್ನು ಹೆಚ್ಚೆಚ್ಚಾಗಿ ಉಪಯೋಗಿಸಲಾಗುತ್ತಿದೆ. ನಿಸರ್ಗದ ಹೊಟ್ಟೆಯೊಳಗಿರುವ ನೀರಿನ ಉಪಯೋಗಕ್ಕೂ ವಿಜ್ಞಾನ ಸಹಾಯವಾಗಬೇಕಾಗಿದೆ.

ನದಿನೀರಿನ ಹಂಚಿಕೆಗಾಗಿ ಜಗಳಾಡುತ್ತಿದ್ದಂತೆಯೇ, ತಮಿಳುನಾಡನ್ನೊಳಗೊಂಡು ಎಲ್ಲ ರಾಜ್ಯಗಳು ಭೂಗರ್ಭದಲ್ಲಿರುವ ನೀರನ್ನು ಹೊರ ತೆಗೆದು ಮಾನವನ ಉಪಯೋಗಕ್ಕೆ ಲಭ್ಯ ಮಾಡಲು ಪ್ರಯತ್ನ ಮಾಡುವುದು ಅತ್ಯಗತ್ಯ. ಕೇಂದ್ರವೂ ಇಂಥ ಯೋಜನೆಗಳನ್ನ ಸಿದ್ಧಗೊಳಿಸಲು, ಕಾರ್ಯರೂಪದಲ್ಲಿ ತರಲು ಸಹಾಯ ಮಾಡಬೇಕು. ನಮ್ಮ ರಾಜ್ಯದ ಮುಖ್ಯಮಂತ್ರಿ "ವಿಚಾರವಂತರ ಕೆರೆ" ಪ್ರಾರಂಭಿಸಿದ್ದಾರೆ ಭೂಗರ್ಭದೊಳಗಿರುವ ನೀರಿನ ಉಪಯೋಗದ ಕಾರ್ಯಕ್ರಮವನ್ನೂ ತಾವು ರಚಿಸಿರುವ "ವಿಚಾರವಂತರ ಕೆರೆ"ಯಲ್ಲಿ ಹಾಕಿ ಅದು ಯಶಸ್ವಿಯಾಗುವಂತೆ ಮಾಡಿದರೆ, ತಮಿಳುನಾಡು ಹಾಗೆಯೇ ಮತ್ತಿನ್ನಿತರ ರಾಜ್ಯಗಳಿಗೂ ಮಾರ್ಗದರ್ಶನ ಮಾಡಿದಂತಾಗುತ್ತದೆ. ತಮಿಳುನಾಡಿನ ಮುಖ್ಯಮಂತ್ರಿ ರಾಮಚಂದ್ರನ್ ಅವರೂ ಇದರ ಕುರಿತು ವಿಚಾರಮಾಡಿ ಕಾರ್ಯಪ್ರವೃತ್ತರಾಗುವುದು ಒಳಿತು.

ಸರ್ಕಾರದ ನಿರ್ಣಯಗಳಿಗೆ ಸ್ವಾಗತ

ಅಧಿಕಾರಕ್ಕೆ ಬಂದ ಕೆಲವೇ ದಿವಸಗಳಲ್ಲಿ ರಾಮಕೃಷ್ಣ ಹೆಗಡೆ ಸರಕಾರ ಕೆಲವು ಮಹತ್ವದ ನಿರ್ಣಯ ತೆಗೆದುಕೊಂಡಿರುವುದು ಸ್ವಾಗತಾರ್ಹ, ರೈತರು ವಿದ್ಯಾರ್ಥಿಗಳು, ಕಾರ್ಮಿಕರ ಮೇಲಿನ ದಾವೆಗಳನ್ನೆಲ್ಲ ರದ್ದುಪಡಿಸಲು ನಿರ್ಣಯಿಸಲಾಗಿದೆ. ನಗರಸಭೆ, ಪಂಚಾಯಂತಿ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕನ್ನು 18 ವಯಸ್ಸಿನವರಿಗೂಕೊಡಲಾಗಿದೆ. ಆಡಳಿತೆಯನ್ನು ವಿಕೇಂದ್ರೀಕರಣಗೊಳಿಸುವ ಉದ್ದೇಶದಿಂದ ಜಿಲ್ಲಾ ಪರಿಷತ್ತುಗಳನ್ನು ರಚಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಇದರ ಜೊತೆಯಲ್ಲಿ ದುರಾಡಳಿತೆಗೊಳಗಾದ ರಾಯಬಾಗ ಸಕ್ಕರೆ ಕಾರ್ಖಾನೆಯ ಆಡಳಿತೆಯನ್ನು ತನ್ನ ವಶಕ್ಕೆ ತೆಗೆದುಕೊಂಡಿದೆ. ಆದರೆ ಈ ರೀತಿ ಮಾಡುವಾಗ ಕಾಂಗ್ರೆಸ್ಸಿನವರು ಅನುಸರಿಸುವ ನೀತಿಯನ್ನೇ ಮುಂದುವರಿಸುವುದು ಸರಿಯಲ್ಲ. ರಾಯಭಾಗ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತೆಯನ್ನು ವಶಪಡಿಸಿಕೊಂಡು, ಸಾರಿಗೆ ಮತ್ತು ಕಾರ್ಮಿಕ ಮಂತ್ರಿ ವಿ. ಎಲ್. ಪಾಟೀಲರ ಮಗನನ್ನು ಸರಕಾರದ ಪರ ಆಡಳಿತಾಧಿಕಾರಿಯನ್ನಾಗಿ ನೇಮಿಸಿರುವುದು ಸರಿಯಲ್ಲ. ಇದು ಸ್ವಜನ ಪಕ್ಷಪಾತಕ್ಕೆ ಅವಕಾಶ ಮಾಡಿಕೊಡುತ್ತದೆ. ಜನರ ಟೀಕೆಗೂ ಅವಕಾಶ ಮಾಡಿಕೊಡುತ್ತದೆ. ಇಂಥ ಕ್ರಮಗಳ ಕುರಿತು ರಾಮಕೃಷ್ಣ ಹೆಗ್ಗಡೆಯವರು ಸ್ವಲ್ಪ ಎಚ್ಚರಿಕೆ ವಹಿಸುವುದು ಅತ್ಯಗತ್ಯ.

ತ್ರಿಪುರಾ ಜನತೆಯ ತೀರ್ಪಿನ ಮಹತ್ವ

–ಇ. ಎಂ. ಎಸ್. ನಂಬೂದಿರಿಪಾಡ್

ತೆಲುಗು ದೇಶಂ ನಾಯಕ ರಾಮರಾವ್ ಆಂಧ್ರಪ್ರದೇಶದಲ್ಲಿ, ಮರುದಿನ ಕರ್ನಾಟಕದಲ್ಲಿ ಜನತಾ ನಾಯಕ ರಾಮಕೃಷ್ಣ ಹೆಗಡೆ, ಅದರ ಮರುದಿನ ತ್ರಿಪುರಾದಲ್ಲಿ ಎಡರಂಗದ ನಾಯಕ ನೃಪೇನ್ ಚಕ್ರವರ್ತಿ ಮುಖ್ಯಮಂತ್ರಿಯಾಗಿ ಪ್ರತಿಜ್ಞೆ ಸ್ವೀಕರಿಸಿದ್ದು ಕಾಂಗ್ರೆಸ್ (ಐ)ಗೆ, ವಿಶೇಷವಾಗಿ ಆ ಪಕ್ಷದ ನಾಯಕಿ ಹಾಗೂ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರಿಗೆ ಬಹುದೊಡ್ಡ ಹೊಡೆತ.

ಆಳುವ ಪಕ್ಷಕ್ಕೆ ತೀವ್ರ ಸೋಲನ್ನುಂಟುಮಾಡಿದ ಮುಖ್ಯ ಶಕ್ತಿಗಳ ರಾಜಕೀಯ ಬಣ್ಣ ಈ ಮೂರು ರಾಜ್ಯಗಳಲ್ಲಿ ಬೇರೆ ಬೇರೆಯಾಗಿದ್ದರೂ ಅವೆಲ್ಲಕ್ಕೂ ಸಾಮಾನ್ಯವಾದ ಒಂದು ಲಕ್ಷಣವಿದೆ. ಹೆಚ್ಚೆಚ್ಚು ಸರ್ವಾಧಿಕಾರದೆಡೆಗೆ ಹೋಗುತ್ತಿರುವ ಹಾಗೂ ಭ್ರಷ್ಟ ಆಡಳಿತ ನಡೆಸುತ್ತಿರುವ ಕೇಂದ್ರದಲ್ಲಿ ಏಜೆಂಟರನ್ನು ಅಧಿಕಾರದಿಂದ ಹೊರಗೆಸೆಯಬೇಕೆಂಬ ಆಕಾಂಕ್ಷೆ ಜನಸಾಮಾನ್ಯರಲ್ಲಿ ಹೆಚ್ಚುತ್ತಿರುವುದಕ್ಕೆ ಇವುಗಳಲ್ಲಿ ಪ್ರತಿಯೊಂದೂ ತನ್ನದೇ ಆದ ರೀತಿಯಲ್ಲಿ ಪ್ರತೀಕವಾಗಿದೆ. ಇಂದಿರಾ ವ್ಯಕ್ತಿತ್ವದ ಆಕರ್ಷಣೆಯೆಂದೇನು ಪತ್ರಕರ್ತರ ಭಾಷೆಯಲ್ಲಿ ಹೇಳಲಾಗುತ್ತಿತ್ತೋ ಅಂತಹದೊಂದು ಅಸ್ತಿತ್ವದಲ್ಲೇ ಇಲ್ಲ ಎಂಬುದು ಸಿದ್ಧವಾಗಿದೆ.

ಗುಣಾತ್ಮಕ ವ್ಯತ್ಯಾಸ

ಈ ಮೂರು ರಾಜ್ಯಗಳಲ್ಲಿ ವಿರೋಧ ಪಕ್ಷಗಳ ಚುನಾವಣಾ ಗೆಲುವನ್ನು ಸ್ವಾಗತಿಸುವ ಸಮಯದಲ್ಲೇ ತ್ರಿಪುರಾದಲ್ಲಿ ಎಡರಂಗದ ಗೆಲುವಿಗೂ, ಆಂಧ್ರಪ್ರದೇಶದಲ್ಲಿ ತೆಲುಗು ದೇಶಂನ ಹಾಗೂ ಕರ್ನಾಟಕದಲ್ಲಿ ಜನತಾ ರಂಗದ ಗೆಲುವಿಗೂ ಇರುವ ಗುಣಾತ್ಮಕ ವ್ಯತ್ಯಾಸವನ್ನು ಉಪೇಕ್ಷಿಸಲು ಸಾಧ್ಯವಿಲ್ಲ.

ಪ್ರಥಮವಾಗಿ ಕಾಣುವ ವ್ಯತ್ಯಾಸವೆಂದರೆ ತ್ರಿಪುರಾದಲ್ಲಿ ಕಾಂಗ್ರೆಸ್ (ಐ) ಟಿ. ಯು. ಜೆ. ಎಸ್. ಕೂಟ ಗೆಲ್ಲಬಹುದೆಂದು ಯಾವ ರಾಜಕೀಯ ನಾಯಕನೂ, ಸಂಪಾದಕನೂ, ಪತ್ರಕರ್ತನೂ ನಿರೀಕ್ಷಿಸಿರಲಿಲ್ಲ. ಆದರೆ ಆಂಧ್ರಪ್ರದೇಶ ಹಾಗೂ ಕರ್ನಾಟಕದಲ್ಲಿ ಬಹುಮತ ಮೊದಲಿಗಿಂತ ಕಮ್ಮಿಯಾದರೂ ಕಾಂಗ್ರೆಸ್ ಸಾಕಷ್ಟು ಬಹುಮತ ಗಳಿಸುವುದೆಂದು ಅವರು ನಿರೀಕ್ಷಿಸಿದ್ದರು. ಏಕೆಂದರೆ ಆವೆರಡು ಎಂದೂ ಅಲುಗಾಡಿಸಲಾಗದ ಕಾಂಗ್ರೆಸ್ (ಐ)ನ ಭದ್ರಕೋಟೆಯೆಂಬ ಭಾವನೆಯಿತ್ತು.

ವಾಸ್ತವ ಫಲಿತಾಂಶ ಮಾತ್ರ ಬೇರೆಯೇ ಆಗಿತ್ತು. ಇದು ಏಕೆ ಹೀಗಾಯಿತೆಂದು ಎಲ್ಲಾ ರಾಜಕೀಯ ಪಂಡಿತರೂ ತಲೆಕೆರೆದುಕೊಂಡು ಕಾರಣ ಹುಡುಕುತ್ತಿದ್ದಾರೆ. ಈ ಲೇಖನದಲ್ಲಿ ಈ ವ್ಯಾಪಕ ಪ್ರಶ್ನೆಯ ಬಗ್ಗೆ ಚರ್ಚಿಸದೆ ತ್ರಿಪುರಾ ಚುನಾವಣೆಗೆ ಮಾತ್ರ ಸೀಮಿತಗೊಳಿಸಿಕೊಂಡು ಇದು ನಮ್ಮ ಹಾಗೂ ನಮ್ಮ ಮಿತ್ರರ ಮತ್ತು ಶತ್ರುಗಳ ನಿರೀಕ್ಷೆಗೆ ಅನುಸಾರವಾಗಿ ಇದೆಯೇ ಎಂದು ಪರಿಶೀಲಿಸುವುದು ನಮ್ಮ ಉದ್ದೇಶ.

ನಮ್ಮ ಶತ್ರುಗಳು ಹೇಳಿಕೊಳ್ಳುವ ಒಂದು ಅಂಶವನ್ನು ಮೊದಲು ನೋಡೋಣ. ಅವರ ಪ್ರಕಾರ ಎಡರಂಗದ ಸ್ಥಾನಗಳು 1977 ರಲ್ಲಿ 56 ಇದ್ದದ್ದು ಈಗ 39 ಕ್ಕಿಳಿದಿದೆಯಾದ್ದರಿಂದ ಅದು ಒಂದು ತರದ ಸೋಲನ್ನುಂಡಿದೆ.

ಪಶ್ಚಿಮ ಬಂಗಾಳದಲ್ಲಿ ಮೇನಲ್ಲಿ ಚುನಾವಣೆ ನಡೆದಾಗಲೂ ಇದೇ ವಾದ ಹೂಡಿ ಕಲ್ಕತ್ತೆಯಲ್ಲಿ ನಾವು ಸೋಲನ್ನುಂಡುದಾಗಿ ಹೇಳಲಾಗಿತ್ತು. ಆದರೆ ಮತಗಳಿಕೆಯ ದೃಷ್ಟಿಯಿಂದ ನೋಡಿರದೆ ಪಶ್ಚಿಮ ಬಂಗಾಲದಲ್ಲಿ ಇಡೀಯಾಗಿ ಮಾತ್ರವಲ್ಲ ಕಲ್ಕತ್ತೆಯಲ್ಲೇ ಎಡರಂಗ ಪ್ರಗತಿ ಸಾಧಿಸಿದೆ. ವಿರೋಧ ಪಕ್ಷಗಳ ಸಾಧನೆಗೆ ಹೋಲಿಸಿದಾಗ ಉತ್ತಮಗೊಂಡಿರಲು ಹಾಗೂ ಎಡರಂಗಕ್ಕೆ (ಕಲ್ಕತ್ತೆಯಲ್ಲಿ) ಸ್ಥಾನ ಕಮ್ಮಿಯಾಗಲು ಕಾರಣ ವಿರೋಧೀ ಶಕ್ತಿಗಳು ಮೊದಲು ಬೇರೆ ಬೇರೆಯಾಗಿದ್ದದ್ದು ಈಗ ಒಂದಾಗಿವೆ ಎಂದು ಆಗ ನಾವು ಹೇಳಿದ್ದೆವು.

ಬೆಂಬಲ ಕಮ್ಮಿಯಾಗಿಲ್ಲ

ಇದು ಇತ್ತೀಚಿನ ತ್ರಿಪುರಾ ಚುನಾವಣೆ ಮಟ್ಟಿಗೂ ನಿಜ. 1977ರಲ್ಲಿ ಪ್ರತ್ಯೇಕವಾಗಿ ಸ್ಪರ್ಧಿಸಿದ್ದ ಸಂಯುಕ್ತ ಕಾಂಗ್ರೆಸ್, ಜನತಾ, ಸಿ.ಎಫ್.ಡಿ. ಹಾಗೂ ಟಿ. ಯು. ಜೆ. ಎಸ್. ಈ ಸಲ ಕಾಂಗ್ರೆಸ್ (ಐ) ನೇತೃತ್ವದಲ್ಲಿ ಒಂದಾಗಿದ್ದವು. 1977 ರಲ್ಲಿ ಈ ನಾಲ್ಕು ಪಕ್ಷಗಳು ಒಟ್ಟಾಗಿ 44.93 ಶೇಕಡಾ ಮತಗಳಿಸಿದ್ದರೆ ಈ ಸಲ ಕಾಂಗ್ರೆಸ್ (ಐ) – ಟಿ.ಯು.ಜೆ.ಎಸ್. ಕೂಟ 44-81 ಶೇಕಡಾ ಮತಗಳಿಸಿದೆ, ಎಡರಂಗ ಈ ಎರಡು ಚುನಾವಣೆಗಳಲ್ಲಿ ಗಳಿಸಿದ ಶೇಕಡಾ ಮತಗಳು ಅನುಕ್ರಮವಾಗಿ 51–94 ಹಾಗೂ 53 ಅಂದರೆ ಬೇರೆ ಮಾತಲ್ಲ ಹೇಳುವುದಾದರೆ ಎಡರಂಗದ ಸ್ಥಾನಗಳು ಕಮ್ಮಿಯಾದುದರ ಎಡರಂಗದ ಜನ ಬೆಂಬಲದಲ್ಲಿ 'ಸವೆತ' ವುಂಟಾಗಿರುವುದರ ಸೂಚನೆ ಎನ್ನುವ ವಾದಕ್ಕೆ ಆಧಾರವಿಲ್ಲ.

ಇದನ್ನು ಇನ್ನೊಂದು ರೀತಿಯಲ್ಲಿ ಪರಿಶೀಲಿಸೋಣ. ಒಂದು ವೇಳೆ ಭಾರತದಲ್ಲಿ ಮತ್ತು ಅದರಿಂದಾಗಿ ತ್ರಿಪುರಾದಲ್ಲಿ ಚುನಾವಣೆಗಳು ಅನುಪಾತಿಕ ಪ್ರಾತಿನಿಧ್ಯದ ಆಧಾರದಲ್ಲಿ ನಡೆದಿದ್ದರೆ (ಅಂದರೆ ಪ್ರತಿಯೊಂದು ಪಕ್ಷಕ್ಕೂ ಅದು ಗಳಿಸಿದ ಮತದ ಅನುಪಾತದಲ್ಲಿ ಸ್ಥಾನಗಳು ದೊರೆಯುತ್ತಿದ್ದರೆ) 1977 ರಲ್ಲೂ ಹಾಗೂ ಈಗಲೂ ತ್ರಿಪುರಾ ಎಡರಂಗಕ್ಕೆ ಸುಮಾರು 31 ಸ್ಥಾನಗಳು ಸಿಗಬೇಕಿತ್ತು. 1977ರಲ್ಲಿ ಅದು 56ಕ್ಕೇರಲು ಮತ್ತು ಈಗ 39 ಆಗಲು ಭಾರತದಲ್ಲಿ ಈ ರೀತಿಯ ಅನುಪಾತಿಕ ಪ್ರಾತಿನಿಧ್ಯ ಇಲ್ಲದಿರುವುದೇ ಕಾರಣ.

ಹಾಗೆ ನೋಡಿದರೆ, ಕಳೆದ 31 ವರ್ಷಗಳಲ್ಲಿ ನಡೆದ ಚುನಾವಣೆಗಳಲ್ಲಿ ಒಂದು ಸಲವೂ ಕಾಂಗ್ರೆಸ್(ಐ) ಸಂಸತ್ತಿನಲ್ಲಿ ಬಹುಮತ ಪಡೆಯಲು ಸಾಧ್ಯವಿರಲಿಲ್ಲ. ಯಾಕೆಂದರೆ ಸದನದಲ್ಲಿ ಅದರ "ಭಾರೀ" ಬಹುಮತ ಅಲ್ಪಮತವನ್ನಾಧರಿಸಿತ್ತು.

ಹೋರಾಟದ ಫಲ

ತ್ರಿಪುರಾದಲ್ಲಿ ಎಡರಂಗದ ವಿಜಯ ವಾಸ್ತವವಾಗಿ ಬಹಳ ಮಹತ್ವದ್ದು. ಯಾಕೆಂದರೆ ಇದು ಒಂದೆಡೆ ಬೂರ್ಜ್ವ–ಭೂಮಾಲಕ ವರ್ಗಗಳ ಎಲ್ಲಾ ಪಕ್ಷಗಳ ಹಾಗೂ ಗುಂಪುಗಳ ಕೂಟ ಹಾಗೂ ಇನ್ನೊಂದೆಡೆ ಕಾರ್ಮಿಕ ವರ್ಗ ಹಾಗೂ ಅದರ ಪಕ್ಷದ ನೇತೃತ್ವದಲ್ಲಿ ಕ್ರಾಂತಿಕಾರೀ ಶಕ್ತಿಗಳ ನಡುವಿನ ತೀವ್ರ ರಾಜಕೀಯ ಹೋರಾಟದ ಫಲಿತಾಂಶ. ಈ ಹೋರಾಟ ಇಂದು ನಿನ್ನೆಯದಲ್ಲ–ದಶಕಗಳಿಂದ ನಡೆದುಕೊಂಡು ಬಂದಿದೆ. 1983ರ ಚುನಾವಣಾ ವಿಜಯ, ಐದು ವರ್ಷಗಳ ಹಿಂದೆ ನಡೆದಂತೆಯೇ ತ್ರಿಪುರಾದ ಜನತೆಯ ಸಮರಶೀಲ ಭಾಗಗಳು, ಬುಡಕಟ್ಟು ಜನರು ಹಾಗೂ ಬಂಗಾಲಿಗಳು ತಮ್ಮ ತಮ್ಮಲ್ಲೇ ಒಗ್ಗಟ್ಟಾದ ಹಾಗೂ ಸಮಸ್ತ ದೇಶದ ತಮ್ಮ ಸೋದರರೊಂದಿಗೆ ಸೇರಿಕೊಂಡ ಪ್ರಕ್ರಿಯೆಯ ಫಲ.

ಎಡರಂಗದ ನಾಯಕ ಹಾಗೂ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ ತ್ರಿಪುರಾದ ವಿಧಾನಮಂಡಲ ರಚನೆಯಾದಂದಿನಿಂದ ವಿರೋಧ ಪಕ್ಷದ ನಾಯಕರಾಗಿದ್ದರು. ಆದರೆ 1977 ರಲ್ಲಿ ಜನತಾ ಮುಖ್ಯಮಂತ್ರಿಯ ನೇತೃತ್ವದಲ್ಲಿ ಒಬ್ಬ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಚಾರಿತ್ರಿಕ ಘಟನೆ ನಡೆದ ಕೆಲವೇ ತಿಂಗಳ ಹಿಂದಿನವರೆಗೆ ಅವರು ತಮ್ಮ ಸಹೋದ್ಯೋಗಿಗಳೊಂದಿಗೆ ಜೈಲಿನಲ್ಲಿ ಕೊಳೆಯುತ್ತಿದ್ದರು. ಎಡರಂಗದ ಸರಕಾರದಲ್ಲಿ ಶಿಕ್ಷಣ ಮಂತ್ರಿ ದಶರಥ್‌ದೇಬ್ ಬಹಳ ಕಾಲದಿಂದ ಸಂಸತ್ ಸದಸ್ಯರಾಗಿದ್ದರು. ರೆವಿನ್ಯೂ ಮಂತ್ರಿ ಬೀರೆನ್ ದತ್ತರೊಂದಿಗೆ ಪ್ರಥಮ ಬಾರಿಗೆ 1952ರಲ್ಲಿ ಅವರು ಚುನಾಯಿತರಾಗಿದ್ದರು. ಈ ಮೂವರು ಹಾಗೂ ಇತರ ಸಂಗಾತಿಗಳ ಚಟುವಟಿಕೆಗಳು ಅವಿಭಜಿತ ಕಮ್ಯುನಿಸ್ಟ್ ಪಕ್ಷ, ನಂತರ ಸಿ.ಪಿ.ಐ.(ಎಂ) ಬುಡಕಟ್ಟು ಜನರು ಹಾಗೂ ಇತರರ ನಡುವಿನ ಅಂತರವನ್ನು ಮುರಿದು ತ್ರಿಪುರಾದ ಜನಸಾಮಾನ್ಯರ ಒಗ್ಗಟ್ಟಿನ ಪ್ರತೀಕವಾಗಿ ಮೂಡಿ ಬರಲು ಕಾರಣವಾದ ಸಮರಶೀಲ ರಾಜಕೀಯ ಹೋರಾಟಗಳ ಅಂಗವಾಗಿದೆ.

ಹೆಮ್ಮೆಯ ಪರಂಪರೆ

ದೇಶದ ಈಶಾನ್ಯ ಪ್ರದೇಶ ಈ ಪುಟ್ಟ ರಾಜ್ಯದಲ್ಲಿ ನಾವು ನಿರ್ಮಿಸಿದ ಪರಂಪರೆಯ ಬಗ್ಗೆ ಸಿ.ಪಿ.ಐ.(ಎಂ)ನ ನಮಗೆ ಹಾಗೂ ದೇಶದ ಎಡ ಹಾಗೂ ಪ್ರಜಾಪ್ರಭುತ್ವ ಚಳವಳಿಯ ಇತರ ಸಂಗಾತಿಗಳಿಗೆ ಮತ್ತು ಗೆಳೆಯರಿಗೆ ಹೆಮ್ಮೆಯಿದೆ.

ಸೋದರ ಸೋದರನೊಂದಿಗೆ ಜಗಳವಾಡುವಂತೆ ಮಾಡಿರುವ ಆ ಈಶಾನ್ಯ ಪ್ರದೇಶದ ಬಿರುಗಾಳಿ ಆವೃತ್ತ ಸಾಗರದಲ್ಲಿ ತ್ರಿಪುರಾ ವಾಸ್ತವವಾಗಿ ಒಂದು ನಡುಗಡ್ಡೆಯಂತಾಗಿದೆ. ನೆರೆಯ ರಾಜ್ಯಗಳಲ್ಲಿ ಒಂದಲ್ಲ ಒಂದು ಜನಾಂಗೀಯ ಗುಂಪನ್ನು ಹೊರಹಾಕಬೇಕೆಂಬ ಸಂಕುಚಿತ ಬೇಡಿಕೆ ಕೇಳಬರುತ್ತಿದ್ದರೆ ತ್ರಿಪುರಾದಲ್ಲಿ ತದ್ವಿರುದ್ಧವಾಗಿ ಬುಡಕಟ್ಟು ಜನರು ಹಾಗೂ ಬಂಗಾಲಿಗಳು ಐಕ್ಯತೆಯ ವೀರಾವೇಶದ ಹೋರಾಟದಲ್ಲಿ ತೊಡಗಿದ್ದಾರೆ. ಎಡರಂಗ ಅವರ ಐಕ್ಯತೆಯ ಹೋರಾಟದ ಅಭಿವ್ಯಕ್ತಿಯಾಗಿದೆ.

ತ್ರಿಪುರಾದಲ್ಲಿ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾದಾಗ ಮತ್ತು ನಂತರವೂ ಹಲವು ವರ್ಷಗಳವರೆಗೆ ನಮ್ಮ ರಾಜಕೀಯ ಪಂಡಿತರು ಅದನ್ನು ಬುಡಕಟ್ಟು ಜನರ ಪಕ್ಷ ಎಂದು ಹೀಗಳೆದರು. ದುಡಿಯುವ ಜನತೆಯ ಕ್ರಾಂತಿಕಾರೀ ಮುನ್ನಡೆಯ ಕರೆಗೆ ಓಗೊಟ್ಟ ಬುಡಕಟ್ಟು ಜನ ತಮ್ಮನ್ನು ಪ್ರಜಾಪ್ರಭುತ್ವ ಚಳವಳಿಯ ಒಂದು ಅಂಗವನ್ನಾಗಿ ಮಾಡಿಕೊಂಡು ತಮ್ಮದೇ ಸಮರಶೀಲ ಕಾರ್ಯಕರ್ತರನ್ನು ಬೆಳೆಸಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ದುಡಿದರು. ಎಂಬುದರ ಬಗ್ಗೆ ನಮಗೆ ಹೆಮ್ಮೆಯಿದೆ.

ನಮ್ಮ ಟೀಕಾಕಾರರು ದಶರಥ ದೇಬ್‌ರನ್ನು "ಬುಡಕಟ್ಟು ಜನರ ರಾಜ" ಎಂದು ಹೀಯಾಳಿಸುತ್ತಿದ್ದರು. ಆದರೆ ತ್ರಿಪುರಾದ ಜನತೆಗಾಗಿ ನಿಷ್ಠೆಯಿಂದ ದುಡಿದ ಅವರೀಗ ಸಮಸ್ತ ತ್ರಿಪುರಾ ಜನತೆಯ ನಾಯಕರೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಅದೇ ರೀತಿ ನೃಪೇನ್ ಚಕ್ರವರ್ತಿಯವರನ್ನು ನಮ್ಮ ಟೀಕಾಕಾರರು ಕೇವಲ ಬಂಗಾಲೀಗಳೊಂದಿಗೆ ಸೇರಿಸುತ್ತಿದ್ದರು.

ಸ್ವಲ್ಪ ಬದಲಾವಣೆಯೊಂದಿಗೆ ಪ್ರತಿಜ್ಞೆ ಸ್ವೀಕರಿಸಿದ ಎಡರಂಗ ಸರಕಾರದ ಮೊದಲ ಐದು ವರ್ಷಗಳ ಅವಧಿ ಬುಡಕಟ್ಟು ಜನರ ಹಾಗೂ ಬಂಗಾಲಿಗಳ ಹಿತಕ್ಕಾಗಿ ಹೋರಾಡುವ ಸರಕಾರ ಅದು ಎಂದು ತೋರಿಸಿಕೊಟ್ಟಿದೆ.

ಆದ್ದರಿಂದ ಇತ್ತೀಚಿನ ಚುನಾವಣೆಯ ಮೊದಲು ನಮ್ಮ ಟೀಕಾಕಾರರು ಇನ್ನೊಂದು ರಾಗ ಎಳೆಯಲಾರಂಭಿಸಿದರು. ಸಿ.ಪಿ.ಐ. (ಎಂ) ಬಂಗಾಲಿಗಳ ಪಕ್ಷವಾಗಿ ಬುಡಕಟ್ಟು ಜನರಿಂದ ದೂರವಾಗಿದೆ; ಬುಡಕಟ್ಟು ಜನರು ಕಾಂಗ್ರೆಸ್(ಐ)ನೊಂದಿಗೆ ಮಿತ್ರತ್ವ ಸಾಧಿಸಿದ ಟಿ. ಯು. ಜೆ. ಎಸ್. ಗೆ ನಿಷ್ಠರಾಗಿದ್ದಾರೆ ಎಂದೆಲ್ಲಾ ಹೇಳಲಾರಂಭಿಸಿದರು. ಈ ಅಪಪ್ರಚಾರದ ಆಧಾರದ ಮೇಲೇನೇ ನಮ್ಮ ಶತ್ರುಗಳು ನಮ್ಮ ಜನಬೆಂಬಲದಲ್ಲಿ "ತೀವ್ರ ಸವೆತ"ವುಂಟಾಗುವುದೆಂದು ಆಶಿಸಿದ್ದರು.

ಎರಡು ತೀವ್ರವಾದಿ ಗುಂಪುಗಳು

ಆದರೆ ಇದು ಕೇವಲ ಅಪಪ್ರಚಾರಕ್ಕೆ ಮಾತ್ರ ಸೀಮಿತವಾಗಿರಲಿಲ್ಲ ಜತೆಗೆ ಅದಕ್ಕೆ ಸರಿಹೊಂದುವ ಕಾರ್ಯವೂ ನಡೆದಿತ್ತು. ಟಿ. ಯು. ಜೆ. ಎಸ್. ನೊಳಗೇ ಒಂದು ತೀವ್ರವಾದಿ ಗುಂಪು ಹುಟ್ಟಿಕೊಂಡು ಟಿ.ಯು.ಜೆ.ಎಸ್. ನಾಯಕತ್ವದೊಂದಿಗೆ ಹೊಂದಿಕೊಂಡು ಕಾರ್ಯಪ್ರವೃತ್ತವಾಗಿದ್ದರೆ ಬಂಗಾಲಿಗಳನ್ನು ಆಮ್ರ ಬಂಗಾಲಿ ಹೆಸರಲ್ಲಿ ಸಂಘಟಿಸಲಾಯಿತು. ಇವೆರಡಕ್ಕೂ ಸಮಸ್ತ ಗಡಿ ಪ್ರದೇಶದಲ್ಲಿ ಅಸ್ಥಿರತೆ ಉಂಟುಮಾಡುವಲ್ಲಿ ಆಸಕ್ತಿ ಹೊಂದಿದ್ದ ಏಜೆಂಸಿಗಳ ಬೆಂಬಲವಿತ್ತು. ಇವೆರಡು ಗುಂಪುಗಳ ಚಟುವಟಿಕೆಗಳೇ ಜೂನ್ 1980ರ ದುರಂತ ಘಟನೆಗೆ ಕುಮ್ಮಕ್ಕು ನೀಡಿದ್ದು. ಅಲ್ಲದೆ ಈ ದುರಂತವನ್ನೇ ಅವು ಈ ಎರಡು ಜನಾಂಗಗಳ ನಡುವಿನ ವೈರಭಾವವನ್ನು ಹೆಚ್ಚಿಸಲು ಉಪಯೋಗಿಸಿಕೊಂಡವು.

ಈ ಎರಡು ವಿಚ್ಛಿದ್ರಕಾರೀ ಗುಂಪುಗಳು ಬುಡಕಟ್ಟು ಜನರು ಹಾಗೂ ಇತರರ ನಡುವೆ ಎಡ ಶಕ್ತಿಗಳ ಬೆಂಬಲವನ್ನು ಕಡಿಮೆ ಮಾಡುವವೆಂದು ಆಶಿಸಲಾಗಿತ್ತು. ಆದರೆ ಚುನಾವಣೆಯ ದೃಷ್ಟಿಯಿಂದ ಪರಿಶೀಲಿಸಿದರೆ ಇದರಿಂದ ಬಹಳ ಪ್ರಯೋಜನವೇನೂ ಆಗುವಂತಿರಲಿಲ್ಲ. ಇದಕ್ಕೆ ಕಾಂಗ್ರೆಸ್ (ಐ) ಹಾಗೂ ಟಿ.ಯು.ಜೆ.ಎಸ್. ನಡುವೆ ದೃಢ ಒಪ್ಪಂದ ಆಗಬೇಕಾಗಿತ್ತು. ಆದ್ದರಿಂದಲೇ ಕಾಂಗ್ರೆಸ್ (ಐ)ನ ಬೆಂಬಲಿಗರಲ್ಲಿ ಬಹಳ ಸಂದೇಹಗಳಿದ್ದರೂ ಈ ಎರಡು ಪಕ್ಷಗಳ ನಡುವೆ ಒಪ್ಪಂದ ಏರ್ಪಟ್ಟು ಕಾಂಗ್ರೆಸ್-ಐ 46 ಸ್ಥಾನಗಳನ್ನು ಟಿ.ಯು.ಜೆ.ಎಸ್. 14 ಸ್ಥಾನಗಳನ್ನು ಹಂಚಿಕೊಂಡವು.

ದಾಳಿಯನ್ನು ಹಿಮ್ಮೆಟ್ಟಿಸಲಾಯಿತು

ರಾಜ್ಯದ ಜನತೆಯಲ್ಲಿ ಈ ಕೂಟವನ್ನು ಜನಪ್ರಿಯಗೊಳಿಸಲು ಪ್ರಧಾನ ಮಂತ್ರಿಯವರ ಎರಡು ದಿನಗಳ ಪ್ರಚಾರ ಕಾರ್ಯಕ್ರಮವನ್ನು ಉಪಯೋಗಿಸಿಕೊಳ್ಳಲಾಯಿತು. ಕಾಂಗ್ರೆಸ್ (ಐ) ನೊಂದಿಗೆ ಮೈತ್ರಿಯಿಂದ ಧೈರ್ಯ

(8ನೇ ಪುಟ ನೋಡಿ)

ಭಾರತದ ಬಗ್ಗೆ ಕಾರ್ಲ್

ಮಾರ್ಕ್ಸ್ ಮರಣಶತಾಬ್ಧಿ ಲೇಖನ ಮಾಲೆ

ಲೇಖನ-2

ಭಾರತದಲ್ಲಿ ಬ್ರಿಟಿಷ್ ಆಡಳಿತ

ಕಾರ್ಲ್ ಮಾರ್ಕ್ಸ್‌ರ ಮರಣಶತಾಬ್ಧಿಯನ್ನು ಮಾರ್ಚ್ 14ರಂದು ಜಗತ್ತಿನಾದ್ಯಂತ ಆಚರಿಸಲಿದ್ದು, ಈ ಸಂಬಂಧವಾಗಿ 'ಐಕ್ಯರಂಗ'ವು ಲೇಖನಗಳನ್ನು ಪ್ರಕಟಿಸುತ್ತಿದೆ. ಈ ಲೇಖನ ಮಾಲೆಯಲ್ಲಿ ಪ್ರಸ್ತುತ ಸಂಚಿಕೆಯಲ್ಲಿ 1853 ಮತ್ತು 1857 ರಲ್ಲಿ ಕಾರ್ಲ್ ಮಾರ್ಕ್ಸ್‌ರು ಭಾರತದಲ್ಲಿ ಅಂದಿನ ಬ್ರಿಟಿಷ್ ಆಡಳಿತೆಯ ಕುರಿತು ಮತ್ತು 1857ರಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಸೈನಿಕರಲ್ಲಿ ಎದ್ದ ಬಂಡಾಯದ ಕುರಿತು 'ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್' ಪತ್ರಿಕೆಯಲ್ಲಿ ಬರೆದ ಲೇಖನಗಳಲ್ಲಿ ಕೆಲವನ್ನು ಇಲ್ಲಿ ಕೊಡುತ್ತಿದ್ದೇವೆ.

ಕಾಂ. ಇ.ಎಂ.ಎಸ್. ನಂಬೂದಿರಿ ಪಾಡ್ ಅವರು ಈ ಲೇಖನಗಳ ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಮುಂದಿನ ವಾರ ಪ್ರಕಟಿಸಲಾಗುವುದು. ಅದಕ್ಕೆ ಪೂರಕವಾಗಿ ಈ ಲೇಖನಗಳನ್ನು ಪ್ರಕಟಿಸುತ್ತಿದ್ದೇವೆ.

ಲಂಡನ್,
ಶುಕ್ರವಾರ, ಜೂನ್ 10, 1853

ವಿಯೆನ್ನಾದಿಂದ ಬಂದಿರುವ ತಂತೀವಾರ್ತೆಗಳ ಪ್ರಕಾರ, ಟರ್ಕಿಷ್, ಸಾರ್ಡೀನಿಯನ್ ಹಾಗೂ ಸ್ವಿಸ್ ಪ್ರಶ್ನೆಗಳನ್ನು ಶಾಂತಿಯುತವಾಗಿ ಪರಿಹರಿಸುವುದು ಖಚಿತವೆಂದು ಅಲ್ಲಿ ಭಾವಿಸಲಾಗಿದೆ.

ಕಳೆದ ರಾತ್ರಿ ಹೌಸ್ ಆಫ್ ಕಾಮನ್ಸ್‌ನಲ್ಲಿ ಭಾರತದ ಬಗೆಗೆ ಚರ್ಚೆ ಎಂದಿನಂತೆ ನೀರಸವಾಗಿ ನಡೆಯಿತು. ಸರ್ ಚಾರ್ಲ್ಸ್‌ವುಡ್ ಹಾಗೂ ಸರ್ ಜೆ. ಹಾಗ್‌ರ ಹೇಳಿಕೆಗಳು ಅಸತ್ಯ ಆಶಾವಾದದ ಮುದ್ರೆ ಹೊಂದಿವೆಯೆಂದು ಮಿ. ಬ್ಲಾಕೆಟ್ ಆಪಾದಿಸಿದರು. ಸಚಿವ ಸಂಪುಟದ ಹಾಗೂ ಡೈರೆಕ್ಟರರ ಸಮಿತಿಯ ಬೆಂಬಲಿಗರನೇಕರು ಈ ಆಪಾದನೆಯನ್ನು ತಮ್ಮ ಕೈಲಾದ ಮಟ್ಟಿಗೂ ದೃಢವಾಗಿ ಅಲ್ಲಗಳೆದರು. ಇಂಥ ಪ್ರಸಂಗಗಳಲ್ಲಿ ಯಾವತ್ತೂ ಎದ್ದು ನಿಲ್ಲುವ ಮಿ. ಹ್ಯೂಮ್‌ರವರು ಚರ್ಚೆಯನ್ನು ಮುಕ್ತಾಯಗೊಳಿಸುತ್ತ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದು ಸಚಿವರಿಗೆ ಕರೆ ನೀಡಿದರು. ಚರ್ಚೆಯನ್ನು ಮುಂದಕ್ಕೆ ಹಾಕಲಾಯಿತು.

ಹಿಂದೂಸ್ಥಾನವನ್ನು ಏಷ್ಯನ್ ಪ್ರಮಾಣಗಳ ಒಂದು ಇಟಲಿ ಎಂದು ಹೇಳಬಹುದು. ಅಲ್ಲಿನ ಹಿಮಾಲಯವೇ ಆಲ್ಪ್ಸ್ ಪರ್ವತ, ಬಂಗಾಳದ ಬಯಲೇ ಲೊಂಬಾರ್ಡಿಬಯಲು, ಅಲ್ಲಿನ ಡೆಕ್ಕನ್ ಇಟಲಿಯ ಅಪ್ಪೆನೈನ್ಸ್ ಅಲ್ಲಿನ ಸಿಲೋನ್ ದ್ವೀಪವೇ ಇಟಲಿಯ ಸಿಸಿಲಿ ದ್ವೀಪ. ಭೂಮಿಯ ಉತ್ಪನ್ನಗಳಲ್ಲಿ ಅದೇ ಸಿರಿವಂತ ವೈವಿಧ್ಯತೆ, ರಾಜಕೀಯ ವಿನ್ಯಾಸದಲ್ಲಿ ಅದೇ ವಿಭಿನ್ನತೆ. ಇಟಲಿಯು ಹೇಗೆ ಆಗಾಗ್ಗೆ ವಿಜೇತರ ಖಡ್ಗದ ಒತ್ತಡದಿಂದಾಗಿ ವಿವಿಧ ಜನಾಂಗಗಳ ಸಮೂಹವಾಗಿ ಒಗ್ಗೂಡಿತೋ ಅಂಥದೇ ಪರಿಸ್ಥಿತಿಯನ್ನು ನಾವು ಹಿಂದೂಸ್ಥಾನದಲ್ಲೂ ಕಾಣುತ್ತೇವೆ. ಮಹಮ್ಮದೀಯರ ಇಲ್ಲವೇ ಮೊಘಲರ ಇಲ್ಲವೇ ಬ್ರಿಟನ್ನರ ಒತ್ತಡಕ್ಕೊಳಗಾಗದಿದ್ದಾಗ, ಹಿಂದೂಸ್ಥಾನವು ಅದರಲ್ಲಿ ಎಷ್ಟು ನಗರಗಳು, ಅಥವಾ ಗ್ರಾಮಗಳೂ ಸಹ, ಇದ್ದವೋ ಅಷ್ಟು ಸಂಖ್ಯೆಯ ಸ್ವತಂತ್ರ ಹಾಗೂ ಪರಸ್ಪರ ವಿರೋಧಿ ರಾಜ್ಯಗಳಲ್ಲಿ ವಿಲೀನಗೊಂಡಿದ್ದುದನ್ನು ನಾವು ಕಾಣುತ್ತೇವೆ. ಆದರೂ ಸಾಮಾಜಿಕ ದೃಷ್ಟಿಕೋನದಿಂದ ಹಿಂದೂಸ್ಥಾನವು ಇಟಲಿಯಲ್ಲ, ಆದರೆ ಪ್ರಾಚ್ಯದ ಐರ್ಲೆಂಡ್ ಆಗಿದೆ. ಇಟಲಿ ಹಾಗೂ ಐರ್ಲೆಂಡ್‌ಗಳ ಈ ವಿಚಿತ್ರ ಮೇಳವನ್ನು, ಭೋಗಲಾಲಸೆಯ ಜಗತ್ತು ಹಾಗೂ ದುಃಖ ಸಂಕಟದ ಜಗತ್ತುಗಳ ಈ ವಿಚಿತ್ರ ಮೇಳೈಕೆಯನ್ನು ನಾವು ಹಿಂದೂಸ್ಥಾನದ ಪುರಾತನ ಧರ್ಮ ಪರಂಪರೆಗಳಲ್ಲೇ ಕಾಣಬಹುದು. ಆ ಧರ್ಮವು ಭೋಗಾಸಕ್ತಿಯು ತುಂಬಿತುಳುಕುತ್ತಿರುವ ಧರ್ಮವಾಗಿರುವಾಗಲೇ ದೇಹದಂಡನೆಯ ವೈರಾಗ್ಯದ ಧರ್ಮವೂ ಆಗಿದೆ; ಲಿಂಗ ಹಾಗೂ ಜಗನ್ನಾಥ ಆರಾಧನೆಯ ಧರ್ಮವೂ ಆಗಿದೆ; ಸನ್ಯಾಸಿಯ ಹಾಗೂ ದೇವದಾಸಿಯರ ಧರ್ಮವೂ ಆಗಿದೆ.

ಹಿಂದೂಸ್ಥಾನದಲ್ಲಿ ಸುವರ್ಣಯುಗ ಒಂದಿದ್ದಿತು ಎಂದು ನಂಬುವವರ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಆದರೆ ನನ್ನ ಅಭಿಪ್ರಾಯ ಸಮರ್ಥನೆಗೆ ನಾನು ಸರ್ ಚಾರ್ಲ್ಸ್ ವುಡ್‌ರಂತೆ ಬಹಳ ಹಿಂದಿನ ಕುಲಿಖಾನ್ ಹೇಳಿಕೆಯನ್ನೇನೂ ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಔರಂಗಜೇಬನ ಕಾಲವನ್ನೇ ತೆಗೆದುಕೊಳ್ಳಿ; ಅಥವಾ ಉತ್ತರದಲ್ಲಿ ಮೊಘಲರೂ ದಕ್ಷಿಣದಲ್ಲಿ ಪೋರ್ಚುಗೀಸರೂ ಕಾಣಿಸಿಕೊಂಡ ಕಾಲವನ್ನು ತೆಗೆದುಕೊಳ್ಳಿ; ಅಥವಾ ಮುಹಮ್ಮದೀಯರ ದಾಳಿಯ ಹಾಗೂ ದಕ್ಷಿಣ ಭಾರತದಲ್ಲಿ ಹೆಪ್ಟಾರ್ಕಿ (ಸಪ್ತ ಶಾಸಕರ ಆಡಳಿತ) ಕಾಲವನ್ನೇ ತೆಗೆದುಕೊಳ್ಳಿ; ಅಥವಾ ನಿಮಗೆ ಇಷ್ಟವಾದರೆ, ಇನ್ನೂ ಹಿಂದಕ್ಕೆ, ಪ್ರಾಚೀನ ಕಾಲಕ್ಕೆ ಹೋಗಿ, ಬ್ರಾಹ್ಮಣರ ಪೌರಾಣಿಕ ಕಾಲಗಣನೆಯ ಕ್ರಮವನ್ನೇ ತೆಗೆದುಕೊಳ್ಳಿ. ಕ್ರಿಶ್ಚಿಯನ್ ಧರ್ಮದ ಪ್ರಕಾರ ಜಗತ್ ಸೃಷ್ಟಿಯಾದ ಕಾಲಕ್ಕೂ ಹೆಚ್ಚು ಹಿಂದಿನ ಕಾಲದಲ್ಲೇ ಭಾರತದ ದುರವಸ್ಥೆಯು ಪ್ರಾರಂಭವಾಯಿತೆಂದು ಈ ಬ್ರಾಹ್ಮಣರು ಹೇಳುತ್ತಾರೆ.

ಆದರೆ ಬ್ರಿಟಿಷರು ಹಿಂದೂಸ್ಥಾನಕ್ಕೆ ಉಂಟುಮಾಡಿರುವ ದುರವಸ್ಥೆಯು ಸಾರಭೂತವಾಗಿ ಬೇರೆ ತೆರನಾದದ್ದು, ಅದಕ್ಕೆ ಮುನ್ನ ಹಿಂದೂಸ್ಥಾನವು ಅನುಭವಿಸಿದ ಎಲ್ಲ ಸಂಕಷ್ಟಗಳಿಂದ ಹೆಚ್ಚು ಅನಂತವಾಗಿ ತೀವ್ರತರವಾದುದು, ಎನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ನಾನಿಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಏಷ್ಯಾ ದಬ್ಬಾಳಿಕೆಯ ಮೇಲೆ ಯೂರೋಪಿಯನ್ ದಬ್ಬಾಳಿಕೆಯನ್ನು ನೆಟ್ಟುದಕ್ಕೆ, ಸಾಲ್ಸೆಟ್ ದೈವಮಂದಿರದಲ್ಲಿ ನಮ್ಮನ್ನು ಬೆಚ್ಚಿಬೀಳಿಸುವಂಥ ಯಾವುದೇ ಪೆಡಂಭೂತಕ್ಕಿಂತಲೂ ಹೆಚ್ಚು ಘೋರತರವಾದ ಮೇಳೈಕೆಯನ್ನು ಉಂಟುಮಾಡಿದುದಕ್ಕೆ, ಉಲ್ಲೇಖಿಸುತ್ತಿಲ್ಲ. ಇದೇನೂ ಬ್ರಿಟಿಷ್ ವಸಾಹತು ಆಡಳಿತದ ವಿಶಿಷ್ಟ ಲಕ್ಷಣವೇನಲ್ಲ, ಇದು ಡಚ್ಚರು ಅನುಸರಿಸಿದ ವಿಧಾನದ ಅನುಕರಣೆಯಷ್ಟೆ ಆಗಿದೆ. ಆದ್ದರಿಂದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಕಾರ್ಯ ಚಟುವಟಿಕೆಯ ವಿಶಿಷ್ಟ ಲಕ್ಷಣವನ್ನು ತಿಳಿಸಲು ಜಾವಾದ ಇಂಗ್ಲಿಷ್ ಗವರ್ನರ್ ಸರ್ ಸ್ಟಾಮ್‌ಫರ್ಡ್‌ರಾಫ್‌ಲ್ಸ್‌ರು ಹಳೆಯ ಡಚ್ ಈಸ್ಟ್ ಇಂಡಿಯಾ ಕಂಪನಿಯ ಬಗೆಗೆ ಹೇಳಿರುವುದನ್ನೇ ಅಕ್ಷರಶಃ ಪುನರುದ್ಧರಿಸಿದರೆ ಸಾಕಾಗುತ್ತದೆ:

"ಡಚ್ ಕಂಪನಿಯು ಸಂಪತ್ತನ್ನು ಗಳಿಸುವ ಏಕೈಕ ಉದ್ದೇಶವನ್ನು ಹೊಂದಿದ್ದಿತು. ಅದು ತನ್ನ ಪ್ರಜೆಗಳನ್ನು ಅತ್ಯಂತ ಕೀಳು ಭಾವನೆಯಿಂದ ಅಥವಾ ಸ್ವಲ್ಪವೂ ಸಹಾನುಭೂತಿ ಇಲ್ಲದೆ ಕಾಣುತ್ತಿದ್ದಿತು–ಹಿಂದೆ ಪಶ್ಚಿಮ ಭಾರತದ ಪ್ಲಾಂಟರನೊಬ್ಬ (ವಿಸ್ತಾರವಾದ ತೋಟದ ದಣಿ.– ಅನು.) ತನ್ನ ಎಸ್ಟೇಟಿನಲ್ಲಿದ್ದ ಕೂಲಿಕಾರರ ಹಿಂಡನ್ನು ಕಾಣುತ್ತಿದ್ದಂತೆಯೇ. ತಾನು ಈ ಮಾನವ ಆಸ್ತಿಯನ್ನು ಹಣ ಕೊಟ್ಟು ಕೊಂಡದ್ದರಿಂದ ಅವನು ಹಾಗೆ ವರ್ತಿಸುತ್ತಿದ್ದ. ಆದರೆ ಡಚ್ ಕಂಪನಿಯು ಅದನ್ನೂ ಮಾಡಿರಲಿಲ್ಲ. ಅದು ಆಗ ಅಸ್ತಿತ್ವದಲ್ಲಿದ್ದ ದಬ್ಬಾಳಿಕೆಯ ಎಲ್ಲ ಯಂತ್ರಸಾಧನಗಳನ್ನೂ ಉಪಯೋಗಿಸಿಕೊಂಡು ಜನರಿಂದ ಅವರ ಕೈಲಾಗುವಷ್ಟು ಪರಮಾವಧಿ ಕಾಣಿಕೆಯನ್ನು, ಅವರ ಶ್ರಮದ ಕೊನೆಯ ಹನಿಯನ್ನು, ಹಿಂಡಿ ಹೀರುತ್ತಿದ್ದಿತು. ಹಾಗೆ ಅದು ಚಪಲವಾದ ಅರೆ-ಅನಾಗರಿಕವಾದ ಸರಕಾರದ ಅನಿಷ್ಟ ಚರ್ಯೆಗಳನ್ನೆಲ್ಲ ಉಲ್ಬಣಗೊಳಿಸಿದ್ದಿತು. ರಾಜಕಾರಣಿಗಳ ಎಲ್ಲ ನುರಿತ ಚಮತ್ಕೃತಿಗಳಿಂದಲೂ, ವ್ಯಾಪಾರಗಾರರ ಎಲ್ಲ ಗುತ್ತಿಗೆಕಾರಸ್ವಾರ್ಥಪರತೆಯಿಂದಲೂ ಕಾರ್ಯವನ್ನು ನಡೆಸುತ್ತಿದ್ದಿತು."

ಹಿಂದೂಸ್ಥಾನದಲ್ಲಿ ಎಲ್ಲ ಅಂತರ್ಯುದ್ಧಗಳೂ, ದಾಳಿಗಳೂ, ಕ್ರಾಂತಿಗಳೂ, ದುರಾಕ್ರಮಣಗಳೂ, ಕ್ಷಾಮಗಳೂ ಒಂದಾದ ಮೇಲೊಂದರಂತೆ ಶೀಘ್ರವಾಗಿ, ವಿಚಿತ್ರ ಸಂಕೀರ್ಣತೆಯಿಂದ ಕೂಡಿದವಾಗಿ, ವಿನಾಶಕರವಾಗಿ ಉಂಟಾದಂತೆ ಕಂಡುಬರಬಹುದಾದರೂ, ಅವು ಅದರ ಮೇಲ್ಮೈ ಮೇಲಷ್ಟೆ ಪರಿಣಾಮ ಬೀರಿದವು. ಆದರೆ ಇಂಗ್ಲೆಂಡ್ ಹಾಗಲ್ಲ. ಅದು ಭಾರತೀಯ ಸಮಾಜದ ಇಡೀ ಚೌಕಟ್ಟನ್ನೇ ಮುರಿದು ಹಾಕಿದೆ, ಆ ಚೌಕಟ್ಟನ್ನು ಪುನರ್‌ನಿರ್ಮಿಸುವ ಲಕ್ಷಣಗಳಾವುವೂ ಕಾಣಬರದಂತೆ ಮುರಿದು ಹಾಕಿದೆ. ಹಳೆಯ ಜಗತ್ತನ್ನು ಕಳೆದುಕೊಂಡುದೂ ಹೊಸ ಜಗತ್ತನ್ನು ಪಡೆಯದೆ ಇರುವುದೂ ಹಿಂದೂ ಪ್ರಜೆಯ ಇಂದಿನ ದುರವಸ್ಥೆಗೆ ಒಂದು ವಿಶಿಷ್ಟ ರೀತಿಯ ವಿಷಣ್ಣತೆಯನ್ನು ನೀಡಿದೆ. ಇದು ಬ್ರಿಟನ್ನಿನ ಆಳ್ವಿಕೆಗೆ ಒಳಗಾದ ಹಿಂದೂಸ್ಥಾನವನ್ನು ಅದರ ಎಲ್ಲ ಪುರಾತನ ಪರಂಪರೆಗಳಿಂದಲೂ ಅದರ ಇಡೀ ಗತ ಇತಿಹಾಸದಿಂದಲೂ ಪ್ರತ್ಯೇಕಿಸಿದೆ.

ಏಷ್ಯದಲ್ಲಿ ಸಾಮಾನ್ಯವಾಗಿ ಅನಾದಿ ಕಾಲದಿಂದಲೂ ಸರಕಾರದಲ್ಲಿ ಮೂರು ಇಲಾಖೆಗಳು ಇದ್ದುಕೊಂಡು ಬಂದಿವೆ– ಹಣಕಾಸಿನ ಇಲಾಖೆ ಅಥವಾ ಒಳದೇಶವನ್ನು ಸೂರೆ ಮಾಡುವ ಇಲಾಖೆ; ಯುದ್ಧದ ಇಲಾಖೆ ಅಥವಾ ಹೊರದೇಶವನ್ನು ಸೂರೆ ಮಾಡುವ ಇಲಾಖೆ; ಕೊನೆಯದಾಗಿ, ಮರಾಮತ್ತು (ಲೋಕೋಪಯೋಗಿ) ಇಲಾಖೆ. ಪ್ರಾಚ್ಯದಲ್ಲಿನ ಹವಾಗುಣವೂ ಭೌಗೋಳಿಕ ಪರಿಸ್ಥಿತಿಗಳೂ, ಅದರಲ್ಲೂ ವಿಶೇಷವಾಗಿ ಸಹಾರಾದಿಂದ ಹಿಡಿದು ಅರೇಬಿಯಾ, ಪರ್ಷಿಯಾ, ಇಂಡಿಯಾ ಹಾಗೂ ಟಾರ್ಟರಿ ಮೂಲಕ ಅತ್ಯುನ್ನತ ಏಷ್ಯಾಟಿಕ್ ಪ್ರಸ್ಥಭೂಮಿಯವರೆಗೂ ಹರಡಿರುವ ವಿಶಾಲ ಮರಳುಗಾಡು ಪ್ರದೇಶಗಳೂ, ಅಲ್ಲಿನ ಕೃಷಿ ಕಾರ್ಯವನ್ನು ಕೃತಕ ಕಾಲುವೆ ಹಾಗೂ ಜಲಾಶಯಗಳ ಮೂಲಕ ನಡೆಸುವಂತೆ ಮಾಡಿವೆ. ಈಜಿಪ್ಟ್ ಹಾಗೂ ಇಂಡಿಯಾಗಳಲ್ಲಿರುವಂತೆಯೇ ಮೆಸಪೊಟಾಮಿಯಾ, ಪರ್ಷಿಯಾ ಇತ್ಯಾದಿಗಳಲ್ಲೂ ನದಿಯ ಪ್ರವಾಹಗಳು ತರುವ ಮಣ್ಣನ್ನು ಭೂಮಿಯನ್ನು ಫಲವತ್ತು ಮಾಡಲು ಬಳಸಲಾಗುತ್ತಿದೆ; ಎತ್ತರದಲ್ಲಿರುವ ಸ್ಥಳಗಳ ಪ್ರಯೋಜನ ಪಡೆದುಕೊಂಡು ನೀರಾವರಿ ಕಾಲುವೆಗಳಿಗೆ ನೀರು ಹಾಯಿಸಲಾಗುತ್ತಿದೆ, ನೀರನ್ನು ಮಿತವ್ಯಯದಿಂದ ಎಲ್ಲರೂ ಬಳಸುವಂತೆ ಏರ್ಪಡಿಸುವ ಪ್ರಮುಖಾವಶ್ಯಕತೆಯು ಪಶ್ಚಿಮದಲ್ಲಿ. ಫ್ಲಾಂಡರ್ಸ್ ಹಾಗೂ ಇಟಲಿಗಳಲ್ಲಿರುವಂತೆ, ಖಾಸಗಿ ಉದ್ಯಮಗಳನ್ನು ಸ್ವಯಮೇಚ್ಛೆಯಿಂದ ಜೊತೆಗೂಡುವಂತೆ ಬಲಾತ್ಕರಿಸಿತು. ಆದರೆ ಪ್ರಾಚ್ಯದಲ್ಲಿ ನಾಗರಿಕತೆ ಇನ್ನೂ ತಳಮಟ್ಟದಲ್ಲಿದ್ದುದರಿಂದ ಮತ್ತು ಭೂಹರಹುಗಳು ತುಂಬ ವಿಶಾಲವಾಗಿದ್ದುದರಿಂದ ಅಂತಹ ಸ್ವಯಮೇಚ್ಛೆಯ ಜೊತೆಗೂಡುವಿಕೆ ಸಾಧ್ಯವಿಲ್ಲವಾಯಿತು. ಹಾಗಾಗಿ ಸರ್ಕಾರದ ಕೇಂದ್ರೀಕರಣ ಶಕ್ತಿಯು ಮಧ್ಯೆ ಪ್ರವೇಶಿಸುವುದು ಆವಶ್ಯವಾಯಿತು. ಈ ಕಾರಣದಿಂದಾಗಿಯೇ ಎಲ್ಲ ಏಷ್ಯಾಟಿಕ್ ಸರ್ಕಾರಗಳ ಮೇಲೂ ಒಂದು ಆರ್ಥಿಕ ಕ್ರಿಯೆ ಜರುಗಿಸುವ, ಲೋಕೋಪಯೋಗಿ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ಬಿದ್ದಿತು. ಪಾಲ್ಮೈರಾ, ಪೆಟ್ರಾ, ಯಮೆನ್‌ನಲ್ಲಿನ ಪಾಳು ಪ್ರದೇಶಗಳು, ಈಜಿಪ್ಟ್, ಪರ್ಷಿಯ ಹಾಗೂ ಹಿಂದೂಸ್ಥಾನಗಳ ವಿಶಾಲ ಪ್ರಾಂತಗಳು, ಇವನ್ನೆಲ್ಲ ಒಮ್ಮೆ ಭವ್ಯವಾಗಿ ಸಾಗುವಳಿ ಮಾಡಲಾಗುತ್ತಿದ್ದಿತು. ಈಗ ಈ ಇಡೀ ಪ್ರದೇಶಗಳು ಬಂಜರಾಗಿರುವುದನ್ನು, ಮರುಭೂಮಿಗಳಾಗಿರುವುದನ್ನು ನಾವು ಕಾಣುತ್ತೇವೆ. ವಿಚಿತ್ರವೆನಿಸುವ ಈ ವಾಸ್ತವಾಂಶಕ್ಕೆ ಕಾರಣವೆಂದರೆ, ಭೂಮಿಯನ್ನು ಕೃತಕವಾಗಿ ಫಲವತ್ತು ಮಾಡುವ ಕಾರ್ಯವು ಕೇಂದ್ರ ಸರಕಾರದ ಮೇಲೆ ಅವಲಂಬಿಸಿರುವುದಾಗಿದೆ. ಈ ಸರ್ಕಾರವು ನೀರಾವರಿ ಹಾಗೂ ಚರಂಡಿಗಳ ಏರ್ಪಾಡು ಕಾರ್ಯವನ್ನು ಉಪೇಕ್ಷಿಸಿದರೆ, ಕೂಡಲೇ ಇಡೀ ಭೂಭಾಗಗಳು ಪಾಳು ಬೀಳುತ್ತವೆ. ಒಂದೇ ಒಂದು ವಿಧ್ವಂಸಕ ಯುದ್ಧವೂ ದೇಶವೊಂದನ್ನು ಶತಮಾನಗಳವರೆಗೆ ಜನಶೂನ್ಯವನ್ನಾಗಿ ಮಾಡಬಹುದಾಗಿದೆ, ಆ ದೇಶದ ಸಭ್ಯತೆಯನ್ನೆಲ್ಲ ನಾಶಗೊಳಿಸಬಹುದಾಗಿದೆ, ಎಂಬುದಕ್ಕೂ ಇದೇ ಕಾರಣವಾಗಿದೆ.

ಈಗ ಬ್ರಿಟಿಷರು ಈಸ್ಟ್ ಇಂಡಿಯಾದಲ್ಲಿ ತಮಗೂ ಹಿಂದೆ ಇದ್ದ ಅಧಿಕಾರಿಗಳಿಂದ ಹಣಕಾಸಿನ ಹಾಗೂ ಯುದ್ಧದ ಇಲಾಖೆಯನ್ನೇನೋ ಪಡೆದುಕೊಂಡರು, ಆದರೆ ಲೋಕೋಪಯೋಗಿ ಇಲಾಖೆಯನ್ನು ಸಂಪೂರ್ಣವಾಗಿ ಉಪೇಕ್ಷಿಸಿದ್ದಾರೆ. ಆದ್ದರಿಂದಲೇ ಕೃಷಿ ಕಾರ್ಯವು ಅವನತಿಗೊಂಡಿದೆ.

ಮಾರ್ಕ್ಸ್‌ರ ಬರಹಗಳು

ಅದನ್ನು ಮುಕ್ತ ಸ್ಪರ್ಧೆ laissez fair (ಲೇಸೇ ಫೇರ್), ಹಾಗೂ laissez aller (ಲೇಸೇ ಅಲೇರ್) ಎಂಬ ಬ್ರಿಟಿಷ್ ಸೂತ್ರಗಳ ಮೇಲೆ ನಡೆಸಲು ಸಾಧ್ಯವಿಲ್ಲವಾಗಿದೆ. ಆದರೆ ಏಷ್ಯನ್ ಸಾಮ್ರಾಜ್ಯಗಳಲ್ಲಿ ನಾವು, ಕೃಷಿಕಾರ್ಯವು ಒಂದು ಸರ್ಕಾರದ ಕೆಳಗೆ ಕ್ಷಯಿಸುವುದನ್ನೂ ಇನ್ನೊಂದು ಸರ್ಕಾರದ ಕೆಳಗೆ ಮತ್ತೆ ಚೈತನ್ಯಗೊಳ್ಳುವುದನ್ನೂ ಸಾಮಾನ್ಯವಾಗಿ ಕಾಣುತ್ತೇವೆ. ಸುಗ್ಗಿ ಅಲ್ಲಿ ಒಳ್ಳೆಯ ಅಥವಾ ಕೆಟ್ಟ ಸರಕಾರಗಳ ಮೇಲೆ ಅವಲಂಬಿಸಿರುತ್ತದೆ– ಯೂರೋಪಿನಲ್ಲಿ ಒಳ್ಳೆಯ ಅಥವಾ ಕೆಟ್ಟ ಹವಾಮಾನದ ಪ್ರಕಾರ ಬದಲುವಂತೆಯೇ, ಹೀಗೆ ಕೃಷಿಯನ್ನು ಉಪೇಕ್ಷಿಸಿದುದು, ತಲೆ ಎತ್ತದಂತೆ ಮಾಡಿದುದು, ನೀಚಕಾರ್ಯವಾಗಿದ್ದರೂ, ಅದೇ ಬ್ರಿಟಿಷ್ ದುರಾಕ್ರಮಣಕಾರರು ಭಾರತೀಯ ಸಮಾಜದ ಮೇಲೆ ನೀಡಿದ ಅಂತಿಮ ಭಾರಿ ಪ್ರಹಾರವಾಗಿದ್ದಿತು ಎಂದೇನೂ ಪರಿಗಣಿಸಲಾಗದು. ಅದರ ಜೊತೆಗೇ ಮತ್ತೊಂದು ತೀರ ಭಿನ್ನ ಪ್ರಾಮುಖ್ಯತೆಯ, ಇಡೀ ಏಷ್ಯನ್ ಜಗತ್ತಿನ ಇತಿಹಾಸದಲ್ಲೇ ಹೊಸತಾದುದೆನ್ನುವಂಥ ಘಟನೆಯೂ ಜರುಗಿತು. ಭಾರತದ ಗತ ರಾಜಕೀಯ ಸ್ವರೂಪವು ಎಷ್ಟೇ ಬದಲಾಗುತ್ತಿದ್ದಿತೆಂದು ಕಂಡು ಬಂದರೂ ಅದರ ಸಾಮಾಜಿಕ ಪರಿಸ್ಥಿತಿಯು ಮಾತ್ರ ಅತ್ಯಂತ ಪುರಾತನ ಕಾಲದಿಂದಲೂ ಬದಲಾಗದೆ ಉಳಿದಿದೆ. ಇದು 19ನೆಯ ಶತಮಾನದ ಮೊದಲ ದಶಕದವರೆಗೂ ಹೀಗಿದ್ದಿತು. ಕೈಮಗ್ಗವೂ ನೂಲುವ ರಾಟೆಯೂ ಕ್ರಮಬದ್ಧವಾಗಿ ಲಕ್ಷೋಪಲಕ್ಷ ನೇಕಾರರನ್ನೂ ನೂಲುಕಾರರನ್ನೂ ಉಂಟುಮಾಡುತ್ತಿದ್ದವು. ಅವೇ ಆ ಸಮಾಜ ರಚನೆಯ ಕೇಂದ್ರಬಿಂದುವಾಗಿದ್ದವು. ಯೂರೋಪು ಅನಾದಿ ಕಾಲದಿಂದಲೂ ಭಾರತೀಯ ಕಾರ್ಮಿಕರ ಅದ್ಭುತ ಅರಿವೆ ಸರಕುಗಳನ್ನು ಪಡೆದುಕೊಂಡು ಪ್ರತಿಯಾಗಿ ತನ್ನ ಪ್ರಶಸ್ತ ಲೋಹಗಳನ್ನು ಕಳುಹಿಸಿಕೊಡುತ್ತಿದ್ದಿತು, ತನ್ಮೂಲಕ ಅಕ್ಕಸಾಲಿಗನಿಗೆ ಈ ಸಾಮಗ್ರಿಯನ್ನು ಒದಗಿಸುತ್ತಿದ್ದಿತು. ಅಕ್ಕಸಾಲಿಗನು ಭಾರತೀಯ ಸಮಾಜದ ಅತ್ಯಗತ್ಯವಾದ ಸದಸ್ಯನಾಗಿದ್ದಾನೆ. ಈ ಸಮಾಜದ ಅಲಂಕಾರಪ್ರಿಯತೆ ಎಷ್ಟು ಹೆಚ್ಚೆಂದರೆ ಅತ್ಯಂತ ಕೆಳವರ್ಗದ ಜನರೂ, ಬಹುಮಟ್ಟಿಗೆ ಬತ್ತಲೆಯಾಗಿ ಓಡಾಡುವವರೂ ಸಹ, ಸಾಮಾನ್ಯವಾಗಿ ಒಂದು ಜೊತೆ ಬಂಗಾರದ ಕರ್ಣಕುಂಡಲವನ್ನು ತೊಟ್ಟಿರುತ್ತಿದ್ದರು, ಕೊರಳ ಸುತ್ತ ಯಾವುದಾದರೂ ರೀತಿಯ ಚಿನ್ನದ ಆಭರಣವನ್ನು ತೊಟ್ಟಿರುತ್ತಿದ್ದರು. ಕೈ ಬೆರಳು ಕಾಲ್ಬೆರಳುಗಳಲ್ಲಿ ಉಂಗುರಗಳೂ ಸಾಮಾನ್ಯವಾಗಿರುತ್ತಿದ್ದವು. ಹೆಂಗಸರೂ ಮಕ್ಕಳೂ ಸಾಮಾನ್ಯವಾಗಿ ಚಿನ್ನ ಅಥವಾ ಬೆಳ್ಳಿಯ ಭಾರಿ ಕೈಬಳೆ ಹಾಗೂ ಕಾಲಂದಿಗೆಗಳನ್ನು ತೊಟ್ಟಿರುತ್ತಿದ್ದರು. ಮನೆಮನೆಗಳಲ್ಲಿ ಚಿನ್ನದ ಹಾಗೂ ಬೆಳ್ಳಿಯ ದೈವ ವಿಗ್ರಹಗಳನ್ನೂ ಕಾಣಬಹುದಾಗಿತ್ತು. ಬ್ರಿಟಿಷ್ ಆಕ್ರಮಣಕಾರನು ಭಾರತದ ಕೈಮಗ್ಗವನ್ನು ಮುರಿದು ಹಾಕಿದ, ನೂಲುವ ರಾಟೆಯನ್ನು ನಾಶಮಾಡಿದ. ಇಂಗ್ಲೆಂಡು ಭಾರತೀಯ ಅರಿವೆಗಳನ್ನು ಯೂರೋಪಿನ ಮಾರುಕಟ್ಟೆಗಳಿಂದ ಹೊರಗಟ್ಟುವುದನ್ನು ಪ್ರಾರಂಭಿಸಿತು; ಅನಂತರ ಅದು ಹಿಂದೂಸ್ಥಾನಕ್ಕೆ ಹೊಸೆದ ನೂಲನ್ನು ತಂದುಹಾಕಿತು ಮತ್ತು ಕೊನೆಯಲ್ಲಿ ಹತ್ತಿ ಬಟ್ಟೆಗಳ ತವರನ್ನೇ ತನ್ನ ಹತ್ತಿ ಬಟ್ಟೆಗಳಿಂದ ತುಂಬಿತು. 1818 ರಿಂದ 1836ರವರೆಗೆ ಗ್ರೇಟ್ ಬ್ರಿಟನ್ನಿನಿಂದ ಭಾರತಕ್ಕೆ ರಫ್ತಾದ ಹೊಸೆದ ನೂಲಿನ ಪ್ರಮಾಣವು 5200 ಪಟ್ಟು ಹೆಚ್ಚಿತು. 1824 ರಲ್ಲಿ ಭಾರತಕ್ಕೆ ಬ್ರಿಟಿಷ್ ಮಸ್ಲಿನ್ ಬಟ್ಟೆಯ ರಫ್ತು ಕೇವಲ 1,000,000 ಗಜಗಳಾಗಿದ್ದವು. 1837ರಲ್ಲಿ ಅದು 64,000,000 ಗಜಗಳಿಗೂ ಮೀರಿದ್ದಿತು. ಅದೇ ಹೊತ್ತಿನಲ್ಲಿ ಡಾಕ್ಕಾದ ಜನಸಂಖ್ಯೆ 150,000 ನಿವಾಸಿಗಳಿಂದ 20,000 ನಿವಾಸಿಗಳಿಗೆ ಇಳಿಯಿತು. ನೇಯ್ದ ವಸ್ತ್ರಗಳಿಗೆ ಹೆಸರುವಾಸಿಯಾದ ಭಾರತೀಯ ನಗರಗಳ ಈ ರೀತಿಯ ಅವನತಿಯೇ ಬ್ರಿಟಿಷ್ ಆಕ್ರಮಣದ ಅತ್ಯಂತ ಕೀಳು ಪರಿಣಾಮವೇನೂ ಆಗಿರಲಿಲ್ಲ. ಬ್ರಿಟಿಷ್ ಉಗಿಯಂತ್ರವೂ ವಿಜ್ಞಾನವೂ ಹಿಂದೂಸ್ಥಾನದ ಇಡೀ ಉದ್ದಗಲ ಕೃಷಿಗೂ ಕೈಗೆಲಸದ ಕಾರ್ಖಾನೆಗೂ ಮಧ್ಯೆ ಇದ್ದ ಒಕ್ಕೂಟವನ್ನು ಬುಡಮೇಲು ಮಾಡಿದವು.

ಈ ಎರಡು ಪ್ರಸಂಗಗಳೂ–ಒಂದು ಕಡೆ ಹಿಂದೂ ಪ್ರಜೆಯು ಎಲ್ಲ ಪ್ರಾಚ ಜನತೆಗಳಂತೆಯೇ ಮಹಾ ಪ್ರಾಮುಖ್ಯತೆಯ ಲೋಕೋಪಯೋಗಿ ಕಾರ್ಯಗಳನ್ನು, ತನ್ನ ಕೃಷಿಯ ಹಾಗೂ ವಾಣಿಜ್ಯದ ಪ್ರಧಾನ ಉಪಾಧಿಯನ್ನು, ಕೇಂದ್ರ ಸರ್ಕಾರದ ವಶಕ್ಕೇ ಬಿಟ್ಟುಕೊಟ್ಟಿರುವುದು; ಮತ್ತೊಂದು ಕಡೆ, ಇದೇ ಹಿಂದೂ ಪ್ರಜೆ ದೇಶದ ಉದ್ದಗಲ ಹರಡಿ ಹಂಚಿಹೋಗಿರುವುದು ಮತ್ತು ಕೃಷಿ ಹಾಗೂ ಕೈಗೆಲಸ ಕಾರ್ಖಾನೆಗಳು ಕುಲಪತಿಯಾಡಳಿತದ ಗೃಹಗಳಲ್ಲಿ ಒಂದುಗೂಡಿದುದರ ಫಲವಾಗಿ, ಸಣ್ಣ ಕೇಂದ್ರಗಳಲ್ಲಿ ಕೂಡಿಕೊಂಡಿರುವುದು ಈ ಎರಡು ಪ್ರಸಂಗಗಳೂ–ಅನಾದಿ ಕಾಲದಿಂದ ಕೆಲವು ವಿಶಿಷ್ಟ ಲಕ್ಷಣಗಳ ಸಾಮಾಜಿಕ ವ್ಯವಸ್ಥೆಯೊಂದನ್ನು ಜಾರಿಗೆ ತಂದಿದ್ದವು. ಅದನ್ನು **ಗ್ರಾಮ ವ್ಯವಸ್ಥೆ** ಎಂದು ಕರೆಯಲಾಗುತ್ತಿದ್ದಿತು. ಅದು ಈ ಒಂದೊಂದೂ ಸಣ್ಣ ಒಕ್ಕೂಟಗಳಿಗೆ ಸ್ವತಂತ್ರ ಸಂಘಟನೆಯನ್ನೂ ಪ್ರತ್ಯೇಕ ಜೀವನವನ್ನೂ ನೀಡಿದ್ದಿತು. ಈ ವ್ಯವಸ್ಥೆಯ ವಿಶಿಷ್ಟ ಲಕ್ಷಣವನ್ನು ಭಾರತೀಯ ವ್ಯವಹಾರಗಳ ಕುರಿತು ಬ್ರಿಟಿಷ್ ಹೌಸ್ ಆಫ್ ಕಾಮನ್ಸ್‌ನ ಹಳೆಯ ಅಧಿಕೃತ ವರದಿಯೊಂದು ಒಳಗೊಂಡಿರುವ ಈ ಕೆಳಗಿನ ವಿವರಣೆಯಿಂದ ತೀರ್ಮಾನಿಸಬಹುದು :

"ಭೌಗೋಳಿಕವಾಗಿ ಪರಿಗಣಿಸಿದಲ್ಲಿ ಒಂದು ಗ್ರಾಮವು ಕೆಲವು ನೂರು ಅಥವಾ ಸಾವಿರ ಕೃಷಿಯೋಗ್ಯ ಹಾಗೂ ಬಂಜರು ಭೂಮಿಗಳನ್ನುಳ್ಳ ದೇಶದ ಒಂದು ವಿಭಾಗ; ರಾಜಕೀಯವಾಗಿ ಅದು ಒಂದು ಕಾರ್ಪೊರೇಷನ್ನನ್ನೊ ಅಥವಾ ಪಟ್ಟಣವನ್ನೋ ಹೋಲುತ್ತದೆ. ಅದರಲ್ಲಿ ಈ ಕೆಳಗಿನ ವಿವರಣೆಯ ಅಧಿಕಾರಿಗಳೂ ಸೇವಕರೂ ಇರುತ್ತಾರೆ: **ಪಟೇಲ** (ಗೌಡ) ಅಥವಾ ಗ್ರಾಮನಿವಾಸಿಗಳ ಮುಖ್ಯಸ್ಥ ಇವನು ಸಾಮಾನ್ಯವಾಗಿ ಗ್ರಾಮದ ವ್ಯವಹಾರಗಳ ಮೇಲ್ವಿಚಾರಕನಾಗಿರುತ್ತಾನೆ, ನಿವಾಸಿಗಳ ನಡುವಿನ ವಿವಾದಗಳನ್ನು ತೀರ್ಮಾನಿಸುತ್ತಾನೆ, ಸಾರ್ವಜನಿಕ ಶಾಂತಿಪಾಲನೆಯ ಕಾರ್ಯ ನಿರ್ವಹಿಸುತ್ತಾನೆ, ತನ್ನ ಗ್ರಾಮದೊಳಗೇ ಕಂದಾಯವನ್ನು ವಸೂಲು ಮಾಡುವ ಕರ್ತವ್ಯವನ್ನು ನೇರವೇರಿಸುತ್ತಾನೆ, ಅವನ ವೈಯಕ್ತಿಕ ಪ್ರಭಾವವೂ, ತನ್ನ ಕೆಳಗಿರುವ ಜನರ ಪರಿಸ್ಥಿತಿಯನ್ನೂ ಅವರ ಕಾಳಜಿಗಳನ್ನೂ ಅತಿಸೂಕ್ಷ್ಮವಾಗಿ ತಿಳಿದಿರುವುದೂ, ಅವನನ್ನು ಈ ಕರ್ತವ್ಯ ನಿರ್ವಹಿಸುವುದಕ್ಕೆ ಅತ್ಯುತ್ತಮ ಅರ್ಹತೆಯುಳ್ಳವನನ್ನಾಗಿ ಮಾಡಿರುತ್ತವೆ. **ಕುಲಕರ್ಣಿಯು** (ಶಾನುಭೋಗನು) ಸಾಗುವಳಿಯ ಲೆಕ್ಕಾಚಾರವನ್ನು ಇಡುತ್ತಾನೆ. **ತಳವಾರ** ಹಾಗೂ **ತೋಟಿಗಳೂ** ಇರುತ್ತಾರೆ. ಅಪರಾಧ ಹಾಗೂ ಪಾತಕ ಕೃತ್ಯಗಳ ಸಮಾಚಾರ ಸಂಗ್ರಹಿಸುವುದು, ಒಂದು ಹಳ್ಳಿಯಿಂದ ಇನ್ನೊಂದಕ್ಕೆ ಪ್ರಯಾಣ ಮಾಡುವ ಗ್ರಾಮಸ್ಥರಿಗೆ ಬೆಂಗಾವಲು ಹಾಗೂ ರಕ್ಷಣೆ ನೀಡುವುದು, ಇವು ತಳವಾರನ ಕರ್ತವ್ಯಗಳು; ತೋಟಿಯ ಕಾರ್ಯವ್ಯಾಪ್ತಿ ಹೆಚ್ಚಾಗಿ ಹಳ್ಳಿಯ ಒಳಗೇ ಇರುತ್ತದೆ. ಬೆಳೆಗಳನ್ನು ಕಾಪಾಡುವುದು, ಅವುಗಳನ್ನು ಅಳೆಯುವುದರಲ್ಲಿ ನೆರವಾಗುವುದು, ಇವು ಅವನ ಕರ್ತವ್ಯಗಳಲ್ಲಿ ಕೆಲವು. **ಗಡಿರಕ್ಷಕನು** (ಕೊತವಾಲನು) ಗ್ರಾಮದ ಗಡಿಗಳನ್ನು ಕಾಪಾಡುತ್ತಾನೆ, ವಿವಾದ ಬಂದಾಗ ತನ್ನ ಗ್ರಾಮದ ಗಡಿಗೆ ಸಂಬಂಧಿಸಿ ಸಾಕ್ಷ್ಯ ನೀಡುತ್ತಾನೆ. ಕೆರೆಗಳ ನಾಲೆಗಳ ಮೇಲ್ವಿಚಾರಕನು (ನೀರಗಂಟಿ) ಬೇಸಾಯಕ್ಕಾಗಿ ನೀರು ಹಂಚುವ ಕಾರ್ಯವನ್ನು ನೋಡಿಕೊಳ್ಳುತ್ತಾನೆ. ಬ್ರಾಹ್ಮಣನು ಗ್ರಾಮ ದೇವತೆಯ ಪೂಜೆ ನಡೆಸುತ್ತಾನೆ. ಶಾಲಾಧ್ಯಾಪಕನು ಹಳ್ಳಿಯ ಮಕ್ಕಳಿಗೆ ಓದುವುದನ್ನೂ ಮರಳ ಮೇಲೆ ಬರೆಯುವುದನ್ನೂ ಹೇಳಿಕೊಡುತ್ತಿರುವುದನ್ನು ಕಾಣಬಹುದು. ಆ ಮೇಲೆ ಪಂಚಾಂಗ ಬ್ರಾಹ್ಮಣ ಅಥವಾ ಜ್ಯೋತಿಷಿ, ಇತ್ಯಾದಿ ಜನರಿರುತ್ತಾರೆ. ಈ ಅಧಿಕಾರಿಗಳೂ ಸೇವಕರೂ ಸೇರಿ ಸಾಮಾನ್ಯವಾಗಿ ಗ್ರಾಮದ ಆಡಳಿತ ಸಂಸ್ಥೆ ರೂಪಿಸಿರುತ್ತಾರೆ. ಆದರೆ ದೇಶದ ಕೆಲವು ಭಾಗಗಳಲ್ಲಿ ಇದು ಇಷ್ಟು ವ್ಯಾಪಕವಾಗಿಲ್ಲ. ಮೇಲೆ ತಿಳಿಸಿದ ಕೆಲವು ಕಾರ್ಯಕರ್ತವ್ಯಗಳು ಒಬ್ಬನೇ ವ್ಯಕ್ತಿಯಲ್ಲಿ ಏಕತ್ರಗೊಂಡಿರುತ್ತವೆ. ಇನ್ನು ಕೆಲವು ಭಾಗಗಳಲ್ಲಿ ಆಡಳಿತ ಸಂಸ್ಥೆಯು ಮೇಲೆ ತಿಳಿಸಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವ್ಯಕ್ತಿಗಳನ್ನು ಹೊಂದಿರುತ್ತದೆ. ದೇಶದ ನಿವಾಸಿಗಳು ಈ ರೀತಿಯ ಪೌರಾಡಳಿತ ಸರಳ ರೂಪದೊಂದಿಗೆ ಅನಾದಿ ಕಾಲದಿಂದ ಬಾಳು ನಡೆಸಿಕೊಂಡು ಬಂದಿದ್ದಾರೆ. ಗ್ರಾಮಗಳ ಗಡಿಗಳನ್ನು ಸಾಮಾನ್ಯವಾಗಿ ಎಂದೂ ಬದಲಿಸುವುದಿಲ್ಲ. ಯುದ್ಧ ಕ್ಷಾಮ ಅಥವಾ ರೋಗರುಜಿನಗಳಿಂದಾಗಿ ಹಳ್ಳಿಗಳೇ ಆಪತ್ತಿಗೊಳಗಾದರೂ ಅಥವಾ ಪಾಳು ಬಿದ್ದರೂ ಅದೇ ಹೆಸರು, ಅದೇ ಗಡಿಗಳು, ಅದೇ ಹಿತಗಳು, ಅದೇ ಕುಟುಂಬಗಳೂ ಸಹ ಯುಗಾಂತರಗಳವರೆಗೆ ಮುಂದುವರಿದುಕೊಂಡು ಬಂದಿವೆ. ಸಾಮ್ರಾಜ್ಯಗಳು ಒಡೆದು ವಿಭಜನೆಗೊಂಡರೂ ಗ್ರಾಮನಿವಾಸಿಗಳು ಅದರ ಬಗೆಗೆ ಯೋಚಿಸುವ ತೊಂದರೆಯನ್ನೂ ತೆಗೆದುಕೊಳ್ಳುವುದಿಲ್ಲ. ಗ್ರಾಮವು ಇಡೀಯಾಗಿ ಉಳಿದಿರುವವರೆಗೂ, ಅದು ಯಾರ ಅಧಿಕಾರಕ್ಕೆ ವರ್ಗಾಯಿಸಲ್ಪಟ್ಟಿದೆ ಅಥವಾ ಯಾರ ಪ್ರಭುತ್ವಕ್ಕೆ ಒಳಗಾಗಿದೆ, ಎಂಬ ಬಗೆಗೆ ಅವರು ಸ್ವಲ್ಪವೂ ಚಿಂತಿಸುವುದಿಲ್ಲ, ಗ್ರಾಮದ ಆಂತರಿಕ ಆರ್ಥಿಕ ವ್ಯವಸ್ಥೆ ಬದಲಾಗದೆ ಉಳಿದಿರುತ್ತದೆ. ಪಟೇಲ (ಗೌಡ)ನೇ ಇನ್ನೂ ಗ್ರಾಮಸ್ಥರ ಮುಖ್ಯಸ್ಥನಾಗಿರುತ್ತಾನೆ, ಇನ್ನೂ ಗ್ರಾಮದ ನ್ಯಾಯಾಧೀಶ ಅಥವಾ ಮ್ಯಾಜಿಸ್ಟ್ರೇಟ್ ಆಗಿ, ಕಲೆಕ್ಟರ್ ಅಥವಾ ಕಂದಾಯ ವಸೂಲಿಗಾರನಾಗಿ ಕೆಲಸ ಮಾಡುತ್ತಲೇ ಇರುತ್ತಾನೆ."

ಈ ಪುಟ್ಟ ಒಂದೇ ಮಾದರಿಯ ಸಾಮಾಜಿಕಾಂಗ ರೂಪಗಳು ಹೆಚ್ಚಿನ ಮಟ್ಟಿಗೆ ಶಿಥಿಲಗೊಂಡಿವೆ ಮತ್ತು ಕಣ್ಮರೆಯಾಗುತ್ತಿವೆ – ಬ್ರಿಟಿಷ್ ಸುಂಕ ವಸೂಲಿಗಾರನ ಅಥವಾ ಬ್ರಿಟಿಷ್ ಸೈನಿಕನ ಮೃಗೀಯ ಹಸ್ತಕ್ಷೇಪದಿಂದ ಅಷ್ಟಾಗಿ ಅಲ್ಲ, ಆದರೆ ಇಂಗ್ಲೀಷ್ ಉಗಿಯಂತ್ರ ಹಾಗೂ ಇಂಗ್ಲೀಷ್ ಮುಕ್ತ ವ್ಯಾಪಾರದಿಂದ. ಆ ಕುಟುಂಬ ಸಮುದಾಯಗಳು ಗೃಹ ಕೈಗಾರಿಕೆಯ ಮೇಲೆ ಆಧರಿಸಿದ್ದವು. ಕೈಯಲ್ಲೇ ನೇಯುವ, ಕೈಯಲ್ಲೇ ನೂಲುವ ಹಾಗೂ ಕೈಯಲ್ಲೇ ಉಳುವ ಕೃಷಿಯ ಆ ವಿಚಿತ್ರ ಸಂಯೋಜನೆಯು ಆ ಗ್ರಾಮಗಳಿಗೆ ಸ್ವಾವಲಂಬನೆಯ ಶಕ್ತಿ ನೀಡಿದ್ದಿತು. ಇಂಗ್ಲೀಷ್ ಹಸ್ತಕ್ಷೇಪವು ನೂಲುವವನನ್ನು ಲಾಂಕಾಷೈರ್‌ನಲ್ಲೂ ನೇಯುವವನನ್ನು ಬಂಗಾಳದಲ್ಲೂ ಇರಿಸಿ, ಅಥವಾ ಹಿಂದೂ ನೂಲುವವನನ್ನೂ ನೇಕಾರನನ್ನೂ ಕೊಚ್ಚಿ ಹಾಕಿ, ಈ ಪುಟ್ಟ ಅರೆ–ಅನಾಗರಿಕ ಅರೆ–ನಾಗರಿಕ ಸಮುದಾಯಗಳನ್ನು, ಅವುಗಳ ಆರ್ಥಿಕ ನೆಲೆಗಟ್ಟನ್ನು ಸಿಡಿಸುವ ಮೂಲಕ, ನಾಶಗೊಳಿಸಿತು ಮತ್ತು ಹಾಗೆ ಏಷ್ಯದಲ್ಲಿ ಎಂದೂ ಕೇಳಿಬರದಿದ್ದ ಅತ್ಯಂತ ಮಹೋನ್ನತವಾದ ಹಾಗೂ ನಿಜ ಹೇಳುವುದಾದರೆ, ಏಕೈಕ **ಸಾಮಾಜಿಕ** ಕ್ರಾಂತಿಯನ್ನು ಉಂಟು ಮಾಡಿತು.

ಈಗ ಈ ಅತ್ಯಂತ ಹಳೆಯ ನಿರುಪದ್ರವಿಯಾದ ಲಕ್ಷೋಪಲಕ್ಷ ಉದ್ಯಮಶೀಲ ಸಾಮಾಜಿಕ ಸಂಘಟನೆಗಳು ವಿಸಂಘಟಿತವಾಗಿ ಮೂಲ ಘಟಕಗಳಾಗಿ ಒಡೆದು ದುಃಖಸಾಗರಕ್ಕೆ ಎಸೆಯಲ್ಪಟ್ಟಿರುವುದನ್ನೂ, ಅವುಗಳ ಬಿಡಿ ಸದಸ್ಯರು ಏಕಕಾಲದಲ್ಲೇ ತಮ್ಮ ಪುರಾತನ ನಾಗರಿಕತೆಯ ರೂಪವನ್ನೂ ತಲೆತಲಾಂತರಗಳಿಂದ ಬಂದಿದ್ದ ತಮ್ಮ ಜೀವನೋಪಾಯವನ್ನೂ ಕಳೆದುಕೊಂಡಿರುವುದನ್ನೂ ಕಾಣುವುದು ಮಾನವ ಭಾವನೆಗೆ ತುಂಬ ಅಸಹ್ಯಕರವಾಗಿರಲೇಬೇಕು. ಆದರೆ ಈ ಮನೋಹರವಾದ ಗ್ರಾಮ ಸಮುದಾಯಗಳು ನಿರುಪದ್ರವಿಗಳಾಗಿ ಕಂಡು ಬಂದರೂ ಪ್ರಾಚ್ಯ ನಿರಂಕುಶ ಪ್ರಭುತ್ವಕ್ಕೆ ಯಾವತ್ತೂ ದೃಢವಾದ ಅಡಿಪಾಯಗಳಾಗಿದ್ದವೆಂಬುದನ್ನು ನಾವು ಮರೆಯಬಾರದು. ಅವು ಮಾನವನ ಮನಸ್ಸನ್ನು ಸಾಧ್ಯವಾದಷ್ಟೂ ಸಣ್ಣ ಆವರಣದೊಳಗೆ ಹುದುಗಿಸಿ ಇರಿಸಿದ್ದುವು, ಅದು ಪ್ರತಿರೋಧವಿಲ್ಲದೆಯೆ ಮೂಢ ನಂಬಿಕೆಗಳಿಗೆ ಈಡಾಗುವಂತೆ ಮಾಡಿದ್ದವು, ಸಾಂಪ್ರದಾಯಿಕ ನಿಯಮಗಳಿಗೆ ಅದನ್ನು ದಾಸನನ್ನಾಗಿ ಮಾಡಿದ್ದವು, ಆದ್ದರಿಂದ ಎಲ್ಲ ಭವ್ಯತೆ ಹಾಗೂ ಚಾರಿತ್ರಿಕ ಶಕ್ತಿಗಳನ್ನೂ ಕಸಿದುಕೊಂಡಿದ್ದವು. ಈ ಸಣ್ಣ ಗ್ರಾಮ ಸಮುದಾಯಗಳ ಅನಾಗರಿಕ ರೀತಿಯ ಆತ್ಮ ದುರಭಿಮಾನವನ್ನೂ ನಾವು ಮರೆಯಬಾರದು. ಭೂಮಿಯ ಯಾವುದೋ ಕ್ಷುಲ್ಲಕ ಅಲ್ಪ ತುಣುಕಿನಲ್ಲಿ ಕೇಂದ್ರಿಕರಿಸಿ ಕುಳಿತು ಈ ಆತ್ಮ ದುರಭಿಮಾನಿ ಅನಾಗರಿಕ ಜನರು, ಹೊರಗಡೆ ಸಾಮ್ರಾಜ್ಯಗಳು ಸರ್ವನಾಶವಾಗುತ್ತಿದ್ದುದನ್ನು, ಹೇಳಲಾಗದಂಥ ಕ್ರೌರ್ಯ ಕೃತ್ಯಗಳು ಜರುಗುತ್ತಿರುದ್ದುದನ್ನು, ದೊಡ್ಡ ನಗರಗಳ ಜನರು ಕಗ್ಗೊಲೆಗೊಳಗಾಗುತ್ತಿದ್ದುದನ್ನು, ನೈಸರ್ಗಿಕ ಘಟನೆಗಳ ಬಗೆಗೆ ತೋರುವಂಥ ಭಾವನೆಗಿಂತ ಬೇರೆಯಾದ ಯಾವ ರೀತಿಯ ಭಾವನೆಯನ್ನೂ ತೋರದೆ, ಮೌನದಿಂದ ವೀಕ್ಷಿಸುತ್ತಿದ್ದರು. ಕೊನೆಗೆ ಅವರೇ, ಅವರನ್ನು ಗಮನಿಸುವುದೂ ಯೋಗ್ಯವಲ್ಲ ಎಂದು ಬಗೆದಿದ್ದ ಯಾವುದೋ ದುರಾಕ್ರಮಣಕಾರಿಯ ಪ್ರಹಾರಕ್ಕೆ ನಿಸ್ಸಹಾಯಕರಾಗಿ ಬಲಿಯಾದರು. ಘನತೆಗೆ ತಕ್ಕುದಲ್ಲದ, ಜಡವಾಗಿ ನಿಂತ, ಚಟುವಟಿಕೆಗಳಿಲ್ಲದ ಈ ಜೀವನವು, ನಿಷ್ಕ್ರಿಯ ರೀತಿಯ ಈ ಅಸ್ತಿತ್ವವು, ಮತ್ತೊಂದು ಕಡೆ ಇದಕ್ಕೆ ವೈದೃಶ್ಯವಾಗಿ, ಉನ್ಮತ್ತವಾದ, ಗೊತ್ತುಗುರಿ ಇಲ್ಲದ, ಅಮಿತ ವಿನಾಶಕರವಾದ ಶಕ್ತಿಗಳಿಗೆ ಜನ್ಮ ನೀಡಿತು ಮತ್ತು ಹಿಂದೂಸ್ಥಾನದಲ್ಲಿ ಕೊಲೆಯನ್ನೇ ಒಂದು ಧಾರ್ಮಿಕ ಕರ್ಮ

(6ನೇ ಪುಟ ನೋಡಿ)

ಬ್ರಿಟಿಷ್ ಆಡಳಿತ

(5ನೇ ಪುಟದಿಂದ)

ವನ್ನಾಗಿ ಮಾಡಿತು, ಎಂಬುದನ್ನು ನಾವು ಮರೆಯಬಾರದು. ಈ ಪುಟ್ಟ ಸಮುದಾಯಗಳು ಜಾತಿ ಭೇದಗಳ, ಗುಲಾಮಗಿರಿಯ ಮಾಲಿನ್ಯತೆಯಿಂದ ತುಂಬಿದ್ದವು, ಮಾನವನನ್ನು ಪರಿಸ್ಥಿತಿಯ ಪ್ರಭುವನ್ನಾಗಿ ಮೇಲೇರಿಸುವ ಬದಲು ಅವನನ್ನು ಬಾಹ್ಯ ಪರಿಸ್ಥಿತಿಗಳಿಗೆ ಅಧೀನನನ್ನಾಗಿ ಮಾಡಿದ್ದವು, ಅವು ಸ್ವಯಂವಿಕಾಸದ ಸಾಮಾಜಿಕ ಸ್ಥಿತಿಯನ್ನು ಎಂದೆಂದಿಗೂ ಬದಲದ ನೈಸರ್ಗಿಕ ವಿಧಿನಿಯಮವನ್ನಾಗಿ ಪರಿವರ್ತಿಸಿದ್ದವು, ಹಾಗೆ ನಿಸರ್ಗವನ್ನು ಪಶುಪ್ರಾಯವಾಗಿ ಪೂಜಿಸುವುದನ್ನು ಜಾರಿಗೆ ತಂದವು, ನಿಸರ್ಗದ ಪ್ರಭುವಾದ ಮಾನವನು ಮಂಡಿಯೂರಿ ಕುಳಿತು ಕೋತಿ ಹನುಮಾನ್‌ನನ್ನೂ ಹಸು ಸಬ್ಬಳವನ್ನೂ ಪೂಜಿಸುವಂತೆ ಮಾಡಿ ಮಾನವನ ಅಧಃಪತನವನ್ನು ಪ್ರದರ್ಶಿದವು ಎಂಬುದನ್ನೂ ನಾವು ಮರೆಯಬಾರದು.

ಇಂಗ್ಲೆಂಡು ಹಿಂದೂಸ್ಥಾನದಲ್ಲಿ ಸಾಮಾಜಿಕ ಕ್ರಾಂತಿಯನ್ನು ಉಂಟುಮಾಡುವುದರಲ್ಲಿ ಅತ್ಯಂತ ಕೀಳು ಹಿತಾಸಕ್ತಿಗಳಿಂದಷ್ಟೆ ಪ್ರೇರಿತವಾಗಿದ್ದಿತು, ಮತ್ತು ಅವನ್ನು ಜಾರಿಗೆ ತರುವ ರೀತಿಯಲ್ಲೂ ದಡ್ಡತನದಿಂದ ಕೂಡಿದ್ದಿತು, ಎಂಬುದು ನಿಜ. ಆದರೆ ಅದು ಪ್ರಕೃತದ ಪ್ರಶ್ನೆಯಲ್ಲ. ಪ್ರಕೃತದ ಪ್ರಶ್ನೆಯೆಂದರೆ, ಏಷ್ಯದ ಸಾಮಾಜಿಕ ಸ್ಥಿತಿಯಲ್ಲಿ ಮೂಲಭೂತ ಕ್ರಾಂತಿಯನ್ನು ಉಂಟುಮಾಡದೆಯೇ ಮಾನವಕುಲವು ತನ್ನ ವಿಧಿಬದ್ಧ ಕರ್ತವ್ಯವನ್ನು ಪೂರೈಸಬಲ್ಲುದೆ ? ಎಂಬುದಾಗಿದೆ. ಇಲ್ಲದಿದ್ದರೆ, ಇಂಗ್ಲೆಂಡಿನ ಅಪರಾಧಗಳು ಏನೇ ಆಗಿರಬಹುದಾಗಿದ್ದರೂ ಅದು ತನಗೆ ತಾನೇ ತಿಳಿಯದೆಯೇ ಆ ಕ್ರಾಂತಿಯನ್ನು ಉಂಟುಮಾಡುವುದರಲ್ಲಿ ಇತಿಹಾಸದ ಸಾಧನವಾಗಿದ್ದಿತು. ಹಾಗಾದರೆ, ಪುರಾತನ ಜಗತ್ತೊಂದು ಮುರಿದು ಬೀಳುತ್ತಿರುವ ದೃಶ್ಯವು ನಮ್ಮಲ್ಲಿ ವೈಯಕ್ತಿಕವಾಗಿ ಎಂತಹ ಕಹಿ ಭಾವನೆಗಳನ್ನು ಉಂಟುಮಾಡಿದರೂ, ಇತಿಹಾಸದ ದೃಷ್ಟಿಯಿಂದ, ನಾವು ಗ್ಯೋಟೆಯವರೊಂದಿಗೆ ಹೀಗೆ ಉದ್ಗರಿಸಬಹುದಲ್ಲವೆ :

"ಈ ಚಿತ್ರಹಿಂಸೆಯು ಅಧಿಕ
ಸಂತಸವ ತರುವಲ್ಲಿ
ಅದಕಾಗಿ ನಾವೇಕೆ ಕೊರಗ
ಬೇಕು ?
ನುಂಗಲಿಲ್ಲವೇ ತೈಮೂರ
ನಾಡಳಿತ
ಜೀವಿಗಳನಗಣಿತ ಪ್ರಮಾಣ
ದಲ್ಲಿ ?" *

ಕಾರ್ಲ್‌ಮಾರ್ಕ್ಸ್‌ರವರು 1853ರ ಜೂನ್ 10ರಂದು ಬರೆದುದು 'ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್' ಪತ್ರಿಕೆಯ ನಂ. 3804ರಲ್ಲಿ, 1853ರ ಜೂನ್ 25ರಂದು ಪ್ರಕಟವಾಯಿತು.

ಸೌ : ಕಾರ್ಲ್ ಮಾರ್ಕ್ಸ್

ಭಾರತೀಯ ಸೈನ್ಯದಲ್ಲಿ ಬಂಡಾಯ

ಗ್ರೇಟ್ ಬ್ರಿಟನ್ ರೋಮನರ **divide et empera** (ವಿಭಜಿಸಿ ಆಳು) ಎಂಬ ಮಹಾಸೂತ್ರವನ್ನು ಬಳಸಿಕೊಂಡು ಸುಮಾರು 150 ವರ್ಷಗಳಿಂದ ತನ್ನ ಭಾರತೀಯ ಚಕ್ರಾಧಿಪತ್ಯದಲ್ಲಿ ಆಡಳಿತವನ್ನು ಉಳಿಸಿಕೊಂಡು ಬಂದಿದ್ದೆ. ಭಾರತ ಎನ್ನುವುದು ವಿವಿಧ ಕುಲಗಳ, ಬುಡಕಟ್ಟುಗಳ, ಜಾತಿ ಮತಗಳ ಹಾಗೂ ರಾಜಪ್ರಭುತ್ವಗಳ ಪರಸ್ಪರ ಹಗೆತನ ಕೂಡಿಕೊಂಡಿರುವ ಒಂದು ಭೌಗೋಳಿಕ ಏಕತೆಯಾಗಿದೆ. ಈ ಹಗೆತನವೇ ಬ್ರಿಟಿಷರು ತಮ್ಮ ಸರ್ವೋಚ್ಚತೆಯನ್ನು ಮುಂದುವರಿಸಿಕೊಂಡು ಹೋಗಲು ಯಾವತ್ತೂ ಪ್ರಮುಖ ಸೂತ್ರವಾಗಿ ನೆರವಾಗಿದ್ದಿತು. ಆದರೆ ಈಚೆಗಿನ ಕಾಲದಲ್ಲಿ ಈ ಸರ್ವೋಚ್ಚತೆಯ ಸ್ವರೂಪ ಬದಲಿದೆ. ಸಿಂಧ್ ಹಾಗೂ ಪಂಜಾಬುಗಳನ್ನು ಗೆದ್ದ ನಂತರ ಆಂಗ್ಲೋ–ಇಂಡಿಯನ್ ಸಾಮ್ರಾಜ್ಯವು ತನ್ನ ನೈಸರ್ಗಿಕ ಎಲ್ಲೆಗಳನ್ನು ತಲುಪಿದ್ದಿತಷ್ಟೆ ಅಲ್ಲ ಭಾರತೀಯ ರಾಜ್ಯಗಳ ಸ್ವಾತಂತ್ರ್ಯದ ಕೊನೆಯ ಅವಶೇಷಗಳನ್ನೂ ದಮನ ಮಾಡಿದ್ದಿತು, ಎಲ್ಲ ಗಹನವಾದ ಆಂತರಿಕ ಸಂಘರ್ಷಗಳನ್ನೂ ಕೊನೆಗಾಣಿಸಿದ್ದಿತು. ಈಚೆಗೆ ಔಧ್ ಸಂಸ್ಥಾನವನ್ನು ಸಾಮ್ರಾಜ್ಯಕ್ಕೆ ಸೇರ್ಪಡೆ ಮಾಡಿಕೊಂಡುದು ಸ್ವತಂತ್ರ ಭಾರತೀಯ ಸಂಸ್ಥಾನಗಳು ಎನ್ನುವಂತಹವುಗಳ ಅವಶೇಷಗಳು ಇಂಗ್ಲೆಂಡು ಸೈರಿಸಿಕೊಂಡಿರುವುದರಿಂದಷ್ಟೆ ಉಳಿದಿವೆ ಎಂಬ ಅಂಶವನ್ನು ಸಂಪೂರ್ಣವಾಗಿ ಸಾಬೀತು ಮಾಡಿತು. ಅದ್ದರಿಂದಲೇ ಈಸ್ಟ್ ಇಂಡಿಯಾ ಕಂಪನಿಯ ನಿಲುವಿನಲ್ಲಿ ಭಾರಿ ಬದಲಾವಣೆಯಾಗಿರುವುದು. ಅದು ಈಗ ಭಾರತದ ಒಂದು ಭಾಗದ ಮೇಲೆ ದಾಳಿಯನ್ನು ಇನ್ನೊಂದು ಭಾಗದ ನೆರವಿನಿಂದ ಇನ್ನೆಷ್ಟು ಮಾತ್ರವೂ ಮಾಡುತ್ತಿಲ್ಲ, ಆದರೆ ತಾನೇ ಎಲ್ಲ ಭಾಗಗಳಿಗೂ ಅಧಿಪತಿಯಾಗಿರುವ ಸ್ಥಾನವನ್ನು ಪಡೆದುಕೊಂಡಿದೆ. ಇಡೀ ಭಾರತವೇ ಅದರ ಕಾಲ ಕೆಳಗಿದೆ. ಅದು ಇನ್ನೆಷ್ಟು ಮಾತ್ರವೂ ಗೆಲ್ಲಬೇಕಾಗಿಲ್ಲ, ಆದರೆ ಆಗಲೇ ಗೆದ್ದಿರುವ ಏಕೈಕ ವಿಜೇತನಾಗಿದೆ. ಅದರ ವಶದಲ್ಲಿರುವ ಸೈನ್ಯವು ಇನ್ನೆಷ್ಟು ಮಾತ್ರವೂ ಅದರ ಪ್ರಭುತ್ವವನ್ನು ವಿಸ್ತರಿಸಬೇಕಾಗಿಲ್ಲ, ಆದರೆ ಉಳಿಸಿಕೊಂಡು ಬರಬೇಕಾಗಿದೆಯಷ್ಟೆ. ಸೈನಿಕರಾಗಿದ್ದವರನ್ನು ಈಗ ಪೋಲೀಸರನ್ನಾಗಿ ಪರಿವರ್ತಿಸಲಾಗಿದೆ ; 200,000,000 ದೇಶೀಯರನ್ನು 200,000 ಜನರ ದೇಶೀಯ ಸೈನ್ಯಬಲದಿಂದ ಅಂಕೆಯಲ್ಲಿರಿಸಲಾಗಿದೆ. ಈ ದೇಶೀಯ ಸೈನ್ಯಕ್ಕೆ ಇಂಗ್ಲಿಷರೇ ಹಿರಿಯ ಅಧಿಕಾರಿಗಳಾಗಿದ್ದಾರೆ. ಈ ದೇಶೀಯ ಸೈನ್ಯವನ್ನೂ ಕೇವಲ 40,000 ಜನರ ಇಂಗ್ಲಿಷ್ ಸೈನ್ಯಬಲದಿಂದ ಅಂಕೆಯಲ್ಲಿರಿಸಲಾಗಿದೆ. ಆದರೆ ಭಾರತೀಯ ಜನರು ಬ್ರಿಟಿಷರಿಗೆ ಅಧೀನರಾಗಿರುವುದು ಈ ದೇಶೀಯ ಸೈನ್ಯದ ನಿಷ್ಠೆಯ ಮೇಲೆ ಅವಲಂಬಿಸಿರುತ್ತದೆಂಬುದು ಮೊದಲ ನೋಟಕ್ಕೇ ಸ್ಪಷ್ಟವಾಗಿದೆ. ಈ ಸೈನ್ಯವನ್ನು ನಿರ್ಮಿಸಿ ಬ್ರಿಟಿಷ್ ಆಡಳಿತವು ಅದೇ ಹೊತ್ತಿನಲ್ಲಿ ಭಾರತೀಯರ ಪ್ರತಿಭಟನೆಯ ಮೊದಲ ಸಾರ್ವತ್ರಿಕ ಕೇಂದ್ರವನ್ನೂ ಸಂಘಟಿಸಿತು. ಇಂತಹ ಕೇಂದ್ರವನ್ನು ಭಾರತೀಯ ಜನರು ಎಂದೂ ಹೊಂದಿರಲಿಲ್ಲ. ದೇಶೀಯ ಸೈನ್ಯವು ಎಷ್ಟರ ಮಟ್ಟಿಗೆ ಅವಲಂಬನೀಯ ಎಂಬುದು ಅದರ ಈಚೆಗಿನ ದಂಗೆಗಳಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಪರ್ಷಿಯಾದ ಜೊತೆಗೆ ನಡೆದ ಯುದ್ಧದಿಂದಾಗಿ ಬಂಗಾಳಾ ಪ್ರಾಂತದಲ್ಲಿದ್ದ ಯೂರೋಪಿಯನ್ ಸೈನಿಕರ ಸಂಖ್ಯೆಯು ಅತ್ಯಂತ ಕಮ್ಮಿಯಾಗಿದ್ದಾಗ ಈ ದಂಗೆಗಳು ಕೂಡಲೇ ಪ್ರಾರಂಭವಾದವು. ಇದಕ್ಕೆ ಮುನ್ನವೂ ಭಾರತೀಯ ಸೈನ್ಯದಲ್ಲಿ ದಂಗೆಗಳು ನಡೆದಿದ್ದವು. ಆದರೆ ಈಗಿನ ಬಂಡಾಯವು ಕೆಲವು ವಿಶಿಷ್ಟ ಘಾತುಕ ಲಕ್ಷಣಗಳನ್ನು ಹೊಂದಿದೆ. ಇದೇ ಮೊದಲ ಬಾರಿಗೆ ಸಿಪಾಯಿ ದಳಗಳು ತಮ್ಮ ಯೂರೋಪಿಯನ್ ಆಫೀಸರುಗಳನ್ನು ಕೊಲೆ ಮಾಡಿದ್ದಾರೆ ; ಮುಸಲ್ಮಾನರೂ ಹಿಂದೂಗಳೂ ತಮ್ಮ ಪರಸ್ಪರ ವೈರವನ್ನು ಬಿಟ್ಟುಕೊಟ್ಟು ತಮ್ಮ ಸಾಮಾನ್ಯ ಪ್ರಭುಗಳ ವಿರುದ್ಧ ಜೊತೆಗೂಡಿದ್ದಾರೆ ; "ಹಿಂದೂಗಳು ಪ್ರಾರಂಭಿಸಿದ ದಂಗೆಯು ವಾಸ್ತವವಾಗಿ ದೆಹಲಿಯ ಸಿಂಹಾಸನದ ಮೇಲೆ ಮಹಮ್ಮದೀಯ ಚಕ್ರವರ್ತಿಯನ್ನು ಕೂರಿಸುವುದರಲ್ಲಿ ಕೊನೆಗಂಡಿದೆ" ; ದಂಗೆಯು ಕೆಲವೇ ಪ್ರದೇಶಗಳಿಗೇನೂ ಸೀಮಿತವಾಗಿಲ್ಲ ; ಕೊನೆಯದಾಗಿ, ಏಷ್ಯದ ಮಹಾ ದೇಶಗಳು ಇಂಗ್ಲಿಷ್ ಪರಮಾಧಿಕಾರದ ವಿರುದ್ಧ ಸಾರ್ವತ್ರಿಕ ಅತೃಪ್ತಿ ವ್ಯಕ್ತಪಡಿಸುತ್ತಿರುವ ಕಾಲದಲ್ಲೇ ಆಂಗ್ಲೋ – ಇಂಡಿಯನ್ ಸೈನ್ಯದ ಈ ಬಂಡಾಯವು ನಿಸ್ಸಂದೇಹವಾಗಿಯೂ ಪರ್ಷಿಯನ್ ಹಾಗೂ ಚೀಣೀ ಯುದ್ಧಗಳೊಂದಿಗೂ ಸಂಬಂಧ ಹೊಂದಿದೆ.

ಬಂಗಾಳೀ ಸೈನ್ಯದಲ್ಲಿ ನಾಲ್ಕು ತಿಂಗಳ ಹಿಂದೆ ಹರಡತೊಡಗಿದ ಅತೃಪ್ತಿಗೆ, ಸರಕಾರವು ತಮ್ಮ ಮತಧರ್ಮದ ಅನುಷ್ಠಾನದಲ್ಲಿ ಕೈಹಾಕಬಹುದೆಂಬ ದೇಶೀಯರಲ್ಲಿದ್ದ ಅಂಜಿಕೆಯೇ ಕಾರಣವೆಂದು ಹೇಳಲಾಗುತ್ತಿದೆ. ಸೈನಿಕರಿಗೆ ನೀಡಲಾದ ತೋಟಾಗಳ ಮೇಲೆ ಸುತ್ತಿದ್ದ ಕಾಗದಕ್ಕೆ ದನದ ಹಾಗೂ ಹಂದಿಯ ಕೊಬ್ಬನ್ನು ಸವರಲಾಗಿದ್ದಿತು; ಕಾಗದವನ್ನು ಕಡ್ಡಾಯವಾಗಿ ಕಚ್ಚಿ ತೆಗೆಯಬೇಕಾಗಿದ್ದುದರಿಂದ ಅದು ತಮ್ಮ ಧಾರ್ಮಿಕ ವಿಧಿಗಳ ಉಲ್ಲಂಘನೆಯಾಗಿದ್ದಿತೆಂದು ದೇಶೀಯರು ಭಾವಿಸಿದ್ದುದು ಸ್ಥಳೀಯ ಗೊಂದಲಗಳಿಗೆ ಪ್ರೇರಕವಾಗಿದ್ದಿತು. ಜನವರಿ 22ರಂದು ಕಲಕತ್ತದಿಂದ ಅನತಿ ದೂರದಲ್ಲಿರುವ ದಂಡು ಪ್ರದೇಶಗಳಲ್ಲಿ ಬೆಂಕಿ ಪ್ರಕರಣವೊಂದು ಜರುಗಿತು. ಫೆಬ್ರವರಿ ದಿನಾಂಕ 25ರಂದು ಬರ್ಹಾಂಪುರ್‌ನಲ್ಲಿದ್ದ 19ನೆಯ ದೇಶೀಯ ಪಡೆಯ ಸೈನಿಕರು ತಮಗೆ ನೀಡಲಾದ ತೋಟಾಗಳಿಗೆ ಆಕ್ಷೇಪಣೆ ಎತ್ತಿ ದಂಗೆ ಎದ್ದರು. ಮಾರ್ಚ್ ದಿನಾಂಕ 31ರಂದು ಆ ಪಡೆಯನ್ನು ವಿಸರ್ಜಿಸಲಾಯಿತು; ಮಾರ್ಚ್ ತಿಂಗಳ ಕೊನೆಯಲ್ಲಿ ಬ್ಯಾರಕ್‌ಪೂರ್‌ನಲ್ಲಿದ್ದ 34ನೆಯ ಸಿಪಾಯಿ ಪಡೆಯು ತನ್ನ ಸೈನಿಕನೊಬ್ಬ ಪರೇಡ್ ಮೈದಾನದಲ್ಲಿ ಬಾರು ಮಾಡಿದ ಬಂದೂಕಿನೊಂದಿಗೆ ಸಾಲಿನಿಂದ ಮುಂದೆ ಬಂದು ತನ್ನ ಸಂಗಾತಿಗಳಿಗೆ ದಂಗೆ ಏಳಲು ಕರೆನೀಡಿ ಪಡೆಯ ಸಹಾಯಕ ಸೈನ್ಯಾಧಿಕಾರಿಯ ಮೇಲೆಯೂ ಸಾರ್ಜಂಟ್–ಮೇಜರ್ ಮೇಲೆಯೂ ಬಿದ್ದು ಅವರನ್ನು ಗಾಯಗೊಳಿಸುವುದಕ್ಕೆ ಅವಕಾಶ ನೀಡಿತು. ಆಗ ಜರುಗಿದ ಕೈಕೈ ಕಾಳಗವನ್ನು ನೂರಾರು ಸಿಪಾಯಿಗಳು ನಿಷ್ಕ್ರಿಯರಾಗಿ ನಿಂತು ನೋಡಿದರು, ಇತರರು ಕಾಳಗದಲ್ಲಿ ಭಾಗವಹಿಸಿದರು, ತಮ್ಮ ಬಂದೂಕುಗಳ ದಪ್ಪ ತುದಿಗಳಿಂದ ಆಫೀಸರ ಮೇಲೆ ಪ್ರಹಾರ ಮಾಡಿದರು. ಅನಂತರ ಆ ಪಡೆಯನ್ನೂ ವಿಸರ್ಜಿಸಲಾಯಿತು. ಏಪ್ರಿಲ್ ತಿಂಗಳಿನಲ್ಲಿ ಬಂಗಾಳ ಸೈನ್ಯದ ಹಲವಾರು ದಂಡು ಪ್ರದೇಶದಲ್ಲಿ–ಅಲಹಾಬಾದ್, ಆಗ್ರಾ, ಅಂಬಾಲಾಗಳಲ್ಲಿ–ಅಗ್ನಿ ಪ್ರಕರಣಗಳು ನಡೆದವು ; ಮೀರತ್‌ನಲ್ಲಿ ತೃತೀಯ ಲಘು ಅಶ್ವಾರೋಹಿ ಪಡೆಯವರು ದಂಗೆ ಎದ್ದರು; ಮದ್ರಾಸ್, ಮುಂಬಯಿ ಸೈನ್ಯಗಳಲ್ಲೂ ಅಂತಹುವೇ ಅಸಂತೃಪ್ತಿಯ ಪ್ರಕರಣಗಳು ಜರುಗಿದವು. ಮೇ ತಿಂಗಳ ಆರಂಭದಲ್ಲಿ ಔಧ್ ಸಂಸ್ಥಾನದ ರಾಜಧಾನಿಯಾದ ಲಕ್ನೋದಲ್ಲಿ ಬಂಡಾಯಕ್ಕೆ ಸಿದ್ಧತೆಯಾಗುತ್ತಿದ್ದಿತು. ಆದರೆ ಸರ್ ಹೆಚ್. ಲಾರೆನ್ಸ್ ತಡಮಾಡದೆ ಕಾರ್ಯಕೈಕೊಂಡುದರ ಫಲವಾಗಿ ಅದು ತಪ್ಪಿತು. ಮೇ 9ರಂದು ಮೀರತ್‌ನ ತೃತೀಯ ಲಘು ಅಶ್ವಾರೋಹಿ ಪಡೆಯ ಬಂಡಾಯಗಾರರಿಗೆ ನಾನಾ ಅವಧಿಗಳ ಶಿಕ್ಷೆ ನೀಡಿ ಸೆರೆಮನೆಗೆ ಕಳುಹಿಸಲಾಯಿತು. ಮಾರನೆಯ ದಿನ ಸಂಜೆ ತೃತೀಯ ಅಶ್ವಾರೋಹಿ ಪಡೆಯ ಸಿಪಾಯಿಗಳು 11ನೆಯ ಹಾಗೂ 20ನೆಯ ಇತರ ಎರಡು ದೇಶೀಯ ಪಡೆಗಳ ಜೊತೆಗೂಡಿ ಪರೇಡ್ ಮೈದಾನದಲ್ಲಿ ನೆರೆದು ತಮ್ಮನ್ನು ಶಾಂತಗೊಳಿಸಲು ಯತ್ನಿಸುತ್ತಿದ್ದ ಆಫೀಸರನ್ನು ಕೊಂದು ಹಾಕಿದರು, ದಂಡು ಪ್ರದೇಶಗಳಿಗೆ ಬೆಂಕಿ ಹಚ್ಚಿದರು, ಕೈಗೆ ಸಿಕ್ಕಿದ ಇಂಗ್ಲಿಷ್ ಜನರನ್ನೆಲ್ಲ ಸಿಗಿದು ಹಾಕಿದರು. ದಳದ ಬ್ರಿಟಿಷ್ ವಿಭಾಗವು ಪದಾತಿಗಳ ಒಂದು ಪಡೆಯನ್ನೂ, ಅಶ್ವಾರೋಹಿಗಳ ಒಂದುಪಡೆಯನ್ನೂ ಭಾರಿ ಸಂಖ್ಯೆಯಲ್ಲಿ ಕುದುರೆ ಹಾಗೂ ಕಾಲಾಳು ಫಿರಂಗಿ ಸೈನಿಕರನ್ನೂ ಜಮಾಯಿಸಿದರೂ, ಕತ್ತಲಾಗುವವರೆಗೂ ಅವರಿಗೆಚಲಿಸಲು ಸಾಧ್ಯವಾಗಲೇಇಲ್ಲ. ಬಂಡಾಯಗಾರರಿಗೆ ಹೆಚ್ಚಿಗೇನೂ ಹಾನಿ ಉಂಟುಮಾಡಲಾಗದೆ ಅವರು ಬಂಡಾಯಗಾರರು ಬಯಲಿಗೆ ಓಡಿಹೋಗಲು ಮತ್ತು ಅಲ್ಲಿಂದ, ಮೀರತ್‌ನಿಂದ 40 ಮೈಲಿ ದೂರದಲ್ಲಿರುವ ದೆಹಲಿಗೆ ಹೋಗಲು, ಅವಕಾಶ ನೀಡಿದರು. ದೆಹಲಿಯಲ್ಲಿ ಬಂಡಾಯಗಾರರಜೊತೆಗೆ 38ನೇ 54ನೇ ಹಾಗೂ 74ನೇ ಪದಾತಿ ಪಡೆಗಳೂ ದೇಶೀಯ ಫಿರಂಗಿ ಪಡೆಯ ಒಂದು ತಂಡವೂ ಸೇರಿಕೊಂಡವು. ಅವರೆಲ್ಲ ಬ್ರಿಟಿಷ್ ಆಫೀಸರುಗಳ ಮೇಲೆ ಬಿದ್ದರು. ಬಂಡಾಯಗಾರರ ಕೈಗೆ ಸಿಕ್ಕಿದ ಇಂಗ್ಲಿಷ್ ಜನರೆಲ್ಲ ಕೊಲ್ಲಲ್ಪಟ್ಟರು. ದೆಹಲಿಯ ದಿವಂಗತ ಮೊಘಲ್ ದೊರೆಯ ಉತ್ತರಾಧಿಕಾರಿಯನ್ನು ಭಾರತದ ಸಾಮ್ರಾಟನೆಂದು ಘೋಷಿಸಲಾಯಿತು. ಶಾಂತಿಯನ್ನು ಪುನರ್‌ಸ್ಥಾಪಿಸಲಾಗಿದ್ದ ಮೀರತ್ ಪಟ್ಟಣವನ್ನು ಸಂರಕ್ಷಿಸಲು ಕಳುಹಿಸಲಾಗಿದ್ದ ಸೈನಿಕದಳಗಳಲ್ಲಿ, ಮೇ 15 ರಂದು ಅಲ್ಲಿಗೆ ಆಗಮಿಸಿದ ಆರು ದೇಶೀಯ ತಂಡಗಳ ಸ್ಯಾಪರ್ಸ್ ಮತ್ತು ಮೈನರ್ಸ್ (ಸುರಂಗಕಾರರು, ಸಿಡಿಮದ್ದು ಸ್ಥಾಪನೆ ಮಾಡುವವರು) ತಮ್ಮ ದಳಾಧಿಕಾರಿ ಮೇಜರ್ ಫ್ರೇಜರ್‌ನನ್ನು ಕೊಂದು ಕೂಡಲೇ ಬಯಲುಸೀಮೆಗೆ ಓಡಿದರು. ಕುದುರೆ ಫಿರಂಗಿ ಸೈನಿಕ ದಳಗಳೂ 6ನೆಯ ಡ್ರಗ್ಯೂನ್ ಗಾರ್ಡ್ಸ್ ಪಡೆಯ (ಕುದುರೆ ಸಿಪಾಯಿ ರಕ್ಷಣಾಪಡೆಯ) ಹಲವಾರು ದಳಗಳೂ ಆ ಬಂಡಾಯಗಾರರನ್ನು ಅಟ್ಟಿಸಿಕೊಂಡು ಹೋದವು. 50–60 ಬಂಡಾಯಗಾರರು ಗುಂಡಿಗೆ ಬಲಿಯಾದರು. ಉಳಿದವರು ಹೇಗೋ ದೆಹಲಿಗೆ ತಪ್ಪಿಸಿಕೊಂಡು ಹೋದರು. ಪಂಜಾಬ್‌ನ ಫಿರೋಜ್‌ಪುರ್‌ನಲ್ಲಿ 57ನೆಯಹಾಗೂ 45ನೆಯ ದೇಶೀಯ ಪದಾತಿ ಪಡೆಗಳು ಬಂಡಾಯ ಎದ್ದವು. ಆದರೆ ಆ ಬಂಡಾಯವನ್ನು ಬಲಪ್ರಯೋಗದಿಂದ ಹತ್ತಿಕ್ಕಲಾಯಿತು. ಇಡೀ ದೇಶೀಯ ಸೈನಿಕ ದಳಗಳು ಬಹಿರಂಗ ಬಂಡಾಯದ ಸ್ಥಿತಿಯಲ್ಲಿವೆಯೆಂದು ಲಾಹೋರ್‌ನಿಂದ ಬಂದ ಖಾಸಗಿ ಪತ್ರಗಳು ತಿಳಿಸುತ್ತವೆ. ಮೇ 19ರಂದು ಕಲಕತ್ತದಲ್ಲಿ ಇರಿಸಲಾಗಿದ್ದ ಸಿಪಾಯಿಗಳು ಸೇಂಟ್ ವಿಲಿಯಮ್ ಕೋಟೆಯನ್ನು ವಶಪಡಿಸಿಕೊಳ್ಳಲು ವಿಫಲಯತ್ನ ಮಾಡಿದರು. ಬುಷೈರ್‌ನಿಂದ ಮುಂಬಯಿಗೆ ಬಂದ ಮೂರು ಪಡೆಗಳನ್ನು ಕೂಡಲೇ ಕಲಕತ್ತೆಗೆ ಕಳುಹಿಸಲಾಯಿತು.

ಈ ಘಟನೆಗಳನ್ನು ಪರಿಶೀಲಿಸುವಾಗ, ಮೀರತ್‌ನಲ್ಲಿ ಬ್ರಿಟಿಷ್ ಸೇನಾಧಿಪತಿಯ ವರ್ತನೆಯು ಆಶ್ಚರ್ಯಕರವಾಗಿದೆ. ಅವನು ಕದನದ ಸ್ಥಳಕ್ಕೆ ತಡವಾಗಿ ಬಂದುದು ಅರ್ಥವಾಗದ ವಿಷಯವಾಗಿದ್ದಲ್ಲಿ, ಬಂಡಾಯಗಾರರನ್ನು ಬೆನ್ನಟ್ಟಿ ಹೋದ ದುರ್ಬಲ ರೀತಿಯು ಇನ್ನೂ ಹೆಚ್ಚು ಅರ್ಥವಾಗದುದಾಗಿದೆ. ದೆಹಲಿಯು ಯಮುನಾ ನದಿಯ ಬಲದಂಡೆಯ ಮೇಲೂ ಮೀರತ್ ಎಡದಂಡೆಯ ಮೇಲೂ ಸ್ಥಾಪಿತವಾಗಿದ್ದು, ಎರಡೂ ದಂಡೆಗಳೂ ದೆಹಲಿಯಲ್ಲಿ ಒಂದೇ ಸೇತುವೆಯಿಂದ ಸಂಬಂಧಿತವಾಗಿರುವುದರಿಂದ, ಪಲಾಯನ ಮಾಡುತ್ತಿದ್ದ ಬಂಡಾಯಗಾರರ ರಕ್ಷಣಾಸ್ಥಾನಕ್ಕೆ ಮಾರ್ಗವನ್ನು ಕಡಿದು ಹಾಕುವುದಕ್ಕಿಂತ ಹೆಚ್ಚು ಸುಲಭವಾದ ಕಾರ್ಯಬೇರೊಂದಿರಲಿಲ್ಲ.

ಈ ಮಧ್ಯೆ ಅಸಂತುಷ್ಟ ಜಿಲ್ಲೆಗಳಲ್ಲೆಲ್ಲ ಮಾರ್ಷಲ್ ಲಾ (ಸೈನಿಕಾಡಳಿತ) ವನ್ನು ಘೋಷಿಸಲಾಗಿದೆ. ಪ್ರಧಾನವಾಗಿ ದೇಶೀಯರನ್ನೇ ಉಳ್ಳ ಸೈನ್ಯದಳಗಳನ್ನು ದೆಹಲಿಯ ವಿರುದ್ಧ ಉತ್ತರ, ಪೂರ್ವ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಕೇಂದ್ರೀಕರಿಸಲಾಗಿದೆ.

(8ನೇ ಪುಟ ನೋಡಿ)

ಹಳ್ಳಿಗಿಳಿದು ರೈತ ಸಂಘಟನೆ ಬಲಪಡಿಸಲು ಕರೆ

ಸ್ವಾತಂತ್ರ್ಯ ನಂತರ ಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ರಾಜ್ಯದಲ್ಲಿ ಕಾಂಗ್ರೆಸ್ಸೇತರ ಸರಕಾರವನ್ನು ರಚಿಸುವುದು ಸಾಧ್ಯವಾಗಿದೆ. ರೈತ ಮತ್ತು ಕಾರ್ಮಿಕರ ಬೆಂಬಲದಿಂದ ಜನತಾ ಪಕ್ಷದ ಅಧಿಕಾರ ಸ್ಥಾಪಿಸುವುದು ಸಾಧ್ಯವಾಗಿದೆ. ಪರಿಸ್ಥಿತಿಯನ್ನು ಅಂದಾಜು ಮಾಡಿಕೊಂಡು ರೈತ ಕಾರ್ಮಿಕರ ಮತ್ತು ಹಳ್ಳಿಯ ಬಡಜನತೆಯ ಸಮಸ್ಯೆಗಳನ್ನು ಸರಕಾರದ ಗಮನಕ್ಕೆ ತಂದು ಅವುಗಳ ತುರ್ತು ಪರಿಹಾರಕ್ಕಾಗಿ ಒತ್ತಾಯಿಸಬೇಕಾಗಿದೆ. ಅದರೊಂದಿಗೆ ಇಂದಿನ ಅನುಕೂಲ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಬೃಹತ್ ಪ್ರಮಾಣದಲ್ಲಿ ಹಳ್ಳಿಯ ಬಡಜನರ, ರೈತರ ಸಂಘಟನೆಯನ್ನು ಕಟ್ಟಿ ಬೆಳೆಸಬೇಕು ಎಂದು ದ. ಕ. ಜಿಲ್ಲೆಯ ಸುಳ್ಯದಲ್ಲಿ ತಾ 9–2–83 ರಂದು ಸೇರಿದ್ದ ಸುಳ್ಯ ತಾಲ್ಲೂಕು ರೈತಸಂಘದ ವಿಸ್ತೃತ ಸಭೆಯಲ್ಲಿ ಮಾತನಾಡುತ್ತಾ ಕಾ. ಎಂ. ಕೆ. ಭಟ್ ಕರೆ ಇತ್ತರು. ರೈತ ಸಂಘದ ಆಫೀಸಿನಲ್ಲಿ ಕಿಕ್ಕಿರಿದು ಸೇರಿದ್ದ ಸಭೆಯ ಅಧ್ಯಕ್ಷತೆಯನ್ನು ತಾಲ್ಲೂಕು ರೈತ ಸಂಘದ ಅಧ್ಯಕ್ಷ ಕಾ. ಸೂರ್ಯನಾರಾಯಣ ಭಟ್ ವಹಿಸಿದ್ದರು.

ಭಾಷಣವನ್ನು ಮುಂದುವರೆಸಿದ ಕಾ. ಎಂ. ಕೆ. ಯವರು ಹಳ್ಳಿಯ ಬಡಜನರನ್ನು ಸಂಘಟಿಸಬೇಕಾದರೆ ಮುಂದಾಳುಗಳೂ ಕಾರ್ಯಕರ್ತರುಗಳೂ ಹಳ್ಳಿಗಳಿಗೆ ಹೋಗಿ ಅಲ್ಲಿಯ ಜನತೆಯೊಂದಿಗೆ ಬೆರೆತು, ಅವರ ಸಮಸ್ಯೆಗಳನ್ನು ಅರಿತು ಅವರನ್ನು ಸಂಘಟಿಸಬೇಕೆಂದು ಒತ್ತಿ ಹೇಳಿದರು. ಗ್ರಾಮ ಮಟ್ಟದಲ್ಲಿ ಸಂಘಟನೆ ಮತ್ತು ಮುಖಂಡತ್ವವನ್ನು ಬೆಳೆಸಲು ಶ್ರಮಿಸಿ ರೈತ ಸಂಘಕ್ಕೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸದಸ್ಯರನ್ನು ಸೇರಿಸಬೇಕು. ಹಳ್ಳಿ ಹಳ್ಳಿಯಲ್ಲೂ ರೈತ ಕಾರ್ಮಿಕರ ಪತ್ರಿಕೆಯಾದ ಐಕ್ಯರಂಗವನ್ನು ಮತ್ತು ಇತರ ಪುರೋಗಾಮಿ ಸಾಹಿತ್ಯವನ್ನು ದೊಡ್ಡ ರೀತಿಯಲ್ಲಿ ಪ್ರಸಾರ ಮಾಡುವಂತಹ ಪ್ರಮುಖ ಪ್ರಾಥಮಿಕ ಕೆಲಸಕ್ಕೆ ಗಮನ ನೀಯಬೇಕು. ಪ್ರಚಾರ, ಪ್ರಕ್ಷೋಭೆ, ಸಂಘಟನೆ ಮತ್ತು ಹೋರಾಟದ ಕೆಲಸಗಳನ್ನು ಒಟ್ಟೊಟ್ಟಿಗೇ ಮಾಡಬೇಕಾಗಿದೆ ಎಂದ ಕಾ. ಎಂ. ಕೆ. ಯವರು ಸುಳ್ಯ ತಾಲ್ಲೂಕಿನ ಹಳ್ಳಿ ಹಳ್ಳಿಗೆ ಕಾರ್ಯಕರ್ತರ ತಂಡದೊಂದಿಗೆ ಕಾಲ್ನಡೆ ಜಾಥಾದಲ್ಲಿ ಹೋಗುವ ತಮ್ಮ ನಿರ್ಧಾರವನ್ನು ತಿಳಿಸಿದರು.

ಮನೆ ಮನೆಗೆ ಹೋಗಿ ರೈತಸಂಘಕ್ಕೆ ಸದಸ್ಯತ್ವ ಸೇರಿಸುವ ಅವಶ್ಯಕತೆಯನ್ನು ವಿವರಿಸಿದ ರೈತ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ. ಯು. ಜನಾರ್ಧನ ನಾಯಕ್ ಅವರು ಜಿಲ್ಲೆಯಲ್ಲಿ ಕೋಮು ಶಕ್ತಿಗಳು ತಲೆ ಎತ್ತಿರುವ ಅಪಾಯವನ್ನು ಮನಗಾಣಲು ಮತ್ತು ಅವುಗಳ ನಿಜಸ್ವರೂಪವನ್ನು ಬಯಲಿಗೆಳೆಯಲು ಕರೆ ಇತ್ತರು. ರೈತ ಸಂಘದ ರಾಜ್ಯ ಸಮಿತಿಯ ತೀರ್ಮಾನಗಳನ್ನು ಜಾರಿಗೊಳಿಸಲೂ ಅವರು ಕರೆ ಇತ್ತರು. ಸ್ವಾಗತ ಭಾಷಣ ಮಾಡಿದ್ದ ತಾಲ್ಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ. ವೋನಪ್ಪಗೌಡರು ಬದಲಾದ ರಾಜಕೀಯ ಪರಿಸ್ಥಿತಿ ಮತ್ತು ನಾವು ಈ ತನಕ ನಡೆಸಿರುವ ಹೋರಾಟಗಳ ಹಿನ್ನೆಲೆಯಲ್ಲಿ ರೈತಸಂಘವನ್ನು ಬೃಹತ್ ಆಗಿ ಬೆಳೆಸಲು ಕರೆ ಇತ್ತರು.

ಸುಳ್ಯ ತಾಲ್ಲೂಕಿನಲ್ಲಿ ಈ ವರ್ಷ 10 ಸಾವಿರಕ್ಕಿಂತಲೂ ಹೆಚ್ಚಿಗೆ ಸದಸ್ಯತ್ವವನ್ನು ಸೇರಿಸಲು ನಿರ್ಧರಿಸಿದ ಸಭೆಯು ರಾಜ್ಯ ಸಮಿತಿಯ ತೀರ್ಮಾನದಂತೆ ತಾರೀಖು 17 ರಂದು ತಹಸಿಲ್ದಾರರ ಮೂಲಕ ಮುಖ್ಯಮಂತ್ರಿಯವರಿಗೆ ಮನವಿಯನ್ನು ಅರ್ಪಿಸಲೂ ನಿರ್ಣಯಿಸಿತು. ಮುಂದಿನ ದಿನಗಳಲ್ಲಿ ಸ್ಫೂರ್ತಿಯುತವಾಗಿ ಕೆಲಸ ಮಾಡಿ ಸಂಘಟನೆ ಮತ್ತು ಹೋರಾಟಗಳನ್ನು ಬೆಳೆಸುವ ನಿರ್ಧಾರದೊಂದಿಗೆ ಸಭೆಯು ಮುಕ್ತಾಯವಾಯಿತು. ತಾಲ್ಲೂಕು ರೈತ ಮುಖಂಡ ಕಾ. ಬಾಲಕೃಷ್ಣ ಗೌಡರು ಧನ್ಯವಾದವನ್ನು ಅರ್ಪಿಸಿದರು.

ಶಿಕ್ಷಕರ ಚಳವಳಿ ಬೆಂಬಲಿಸಿ ಎಸ್. ಎಫ್. ಐ. ನ ಬೃಹತ್ ಮೆರವಣಿಗೆ

ದಿನಾಂಕ 31–1–83 ರಿಂದ 5–2–83ರ ವರೆಗೆ ಸರದಿ ಉಪವಾಸ ನಡೆಸುತ್ತಿದ್ದ ಕರ್ನಾಟಕ ರಾಜ್ಯ ಖಾಸಗಿ ಶಾಲಾ ನೌಕರರ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ನಗರದ ಶಾಲಾ–ಕಾಲೇಜು ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮೆರವಣಿಗೆ ನಡೆಸಿ ತಹಸಿಲ್ದಾರರಿಗೆ ಮನವಿ ಸಲ್ಲಿಸಿದರು ಮೆರವಣಿಗೆ ನೇತೃತ್ವವನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.)ನ ನಗರ ಸಮಿತಿಯು ವಹಿಸಿಕೊಂಡಿತ್ತು. ನಗರದ ಪ್ರಮುಖ ಬೀದಿಗಳಲ್ಲಿ ಶಾಂತಿಯುತವಾಗಿ ನಡೆದ ಮೆರವಣಿಗೆಯಲ್ಲಿ 1500 (ಒಂದು ಸಾವಿರದ ಐದು ನೂರು)ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಹಾಗೂ 300 (ಮೂರು ನೂರು) ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ತಾಲೂಕ್ ಕಚೇರಿ ಮುಂದೆ ಮನವಿಯನ್ನು ಅರ್ಪಿಸಿದಾಗ ಎಸ್. ಎಫ್. ಐ. ಮುಖಂಡರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ದೆಹಲಿಯಲ್ಲಿ :

ಸಿ. ಪಿ. ಐ. (ಎಂ) ಮತ್ತು ಸಿ. ಪಿ. ಐ. ಮುಖಂಡರ ಸಭೆ

ಸಿ.ಪಿ.ಐ. (ಎಂ) ಮತ್ತು ಸಿ.ಪಿ.ಐ. ಪ್ರತಿನಿಧಿಗಳು ಫೆಬ್ರುವರಿ 5ರಂದು ನವದೆಹಲಿಯಲ್ಲಿ ಸಭೆ ಸೇರಿ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಕುರಿತು ಮುಖ್ಯವಾಗಿ ಜನವರಿ 5 ರಂದು ಮೂರು ರಾಜ್ಯಗಳಿಗೆ ನಡೆದ ಚುನಾವಣೆಯ ನಂತರದ ಪರಿಸ್ಥಿತಿಯನ್ನು ಕುರಿತು ವಿಚಾರ ವಿನಿಮಯ ನಡೆಸಿದರು. ಎಡರಂಗವು ತ್ರಿಪುರಾದಲ್ಲಿ ಅಧಿಕಾರ ವಹಿಸಿಕೊಂಡನಂತರ ಮತ್ತು ಉಳಿದೆರಡು ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ಸೋಲನುಭವಿಸಿದ ಹಿನ್ನೆಲೆಯಲ್ಲಿ ಚುನಾವಣಾ ಫಲಿತಾಂಶವು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಸಹಾಯಕವಾಗಿದೆಯೆಂಬುದು ಕೇಂದ್ರ ಸಮಿತಿಯ ಅಭಿಪ್ರಾಯವಾಗಿದೆಯೆಂಬುದಾಗಿಯೂ ಇದರಿಂದಾಗಿ ಆಳುವ ಪಕ್ಷದೊಳಗೆ ಬಿಕ್ಕಟ್ಟು ಹೆಚ್ಚಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಗೆ ಅವಕಾಶವಾಗುತ್ತದೆ. ಇದೇ ಸಂದರ್ಭದಲ್ಲಿ ಆಂಧ್ರ ಪ್ರದೇಶದಲ್ಲಿ ಎಡ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಹಿನ್ನಡೆಯುಂಟಾಗಿ ಅಲ್ಲಿನ ಜನತೆ ತೆಲುಗುದೇಶಂನಲ್ಲಿ ಪರ್ಯಾಯವನ್ನು ಕಂಡುಕೊಂಡಿರುವುದನ್ನು ಸಹ ಕೇಂದ್ರ ಸಮಿತಿ ಗಮನಕ್ಕೆ ತೆಗೆದುಕೊಂಡಿರುವುದಾಗಿ ಸಿ. ಪಿ. ಐ. (ಎಂ) ಪ್ರತಿನಿಧಿಗಳು ಚರ್ಚೆಯಲ್ಲಿ ತಿಳಿಸಿದರು.

ಸಿ. ಪಿ. ಐ. ಇನ್ನೂ ತನ್ನ ಕಾರ್ಯಕಾರೀ ಹಾಗೂ ರಾಷ್ಟ್ರೀಯ ಮಂಡಳಿ ಸಭೆಗಳನ್ನು ನಡೆಸಬೇಕಾಗಿದೆ.

ಎರಡೂ ಕಮ್ಯೂನಿಸ್ಟ್ ಪಕ್ಷಗಳ ಅದೇ ರೀತಿಯಲ್ಲಿ ಇತರ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯ ಮೂಲಕ ಕಾರ್ಮಿಕ ವರ್ಗದ ರೈತಾಪಿ ವರ್ಗದ ಸಾಮೂಹಿಕ ಚಳವಳಿಗಳನ್ನು ಬೆಳೆಸುವ ಬಗ್ಗೆ ಎರಡೂ ಪಕ್ಷಗಳು ಚರ್ಚಿಸಿದರು.

ಇಷ್ಟರಲ್ಲೇ ಎರಡೂ ಪಕ್ಷಗಳ ಮತ್ತು ಸಮಾನ ಮನೋಭಾವದ ಪಕ್ಷಗಳ ನಡುವೆ ಮುಂದಿನ ಚರ್ಚೆ ನಡೆಸಲಾಗುತ್ತದೆ.

ಸಿ. ಪಿ. ಐ. (ಎಂ) ಪರವಾಗಿ ಕಾಂ. ಇ. ಎಂ. ಎಸ್. ನಂಬೂದಿರಿಪಾದ್, ಕಾಂ. ಬಿ. ಟಿ. ರಣದಿವೆ, ಕಾಂ. ಎಂ. ಬಸವಪುನ್ನಯ್ಯ ಮತ್ತು ಕಾಂ. ಹರ್‌ಕಿಶನ್‌ಸಿಂಗ್ ಸುರ್ಜಿತ್ ಅವರುಗಳು ಸಭೆಯಲ್ಲಿ ಭಾಗವಹಿಸಿದ್ದರು. ಸಿ.ಪಿ.ಐ ಪರವಾಗಿ ಕಾಂ. ಸಿ. ರಾಜೇಶ್ವರರಾವ್ ಮತ್ತು ಕಾಂ. ಜಗನ್ನಾಥ ಸರ್ಕಾರ್ ಭಾಗವಹಿಸಿದ್ದರು.

ಕಾಮ್ರೇಡ್ ಪಿ. ಕೆ. ಎಸ್. ಪ್ರಸಾದ್ ನಿಧನ

ಅಂಡಮಾನ್ ಮತ್ತು ನಿಕೋಬಾರ್‌ನ ಟ್ರೇಡ್ ಯೂನಿಯನ್ ನಾಯಕರಾಗಿದ್ದ ಕಾ. ಪಿ. ಕೆ. ಎಸ್. ಪ್ರಸಾದ್ ಅವರು ಜನವರಿ 29 ರಂದು ಕಲ್ಕತ್ತದ ಆಸ್ಪತ್ರೆಯೊಂದರಲ್ಲಿ ನಿಧನರಾದರು. ಅವರಿಗೆ 58 ವರ್ಷ ವಯಸ್ಸಾಗಿತ್ತು.

ರೈಲ್ವೇ ನೌಕರರಾಗಿದ್ದ ಇವರನ್ನು ಕಮ್ಯುನಿಸ್ಟ್ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಕ್ಕಾಗಿ ಸೇವೆಯಿಂದ ನಿವೃತ್ತಗೊಳಿಸಲಾಗಿತ್ತು. ನಂತರ 1964 ರಲ್ಲಿ ಕಾ. ಪ್ರಸಾದರು ಅಂಡಮಾನ್‌ಗೆ ತೆರಳಿದರು. ಅವರು ಅಲ್ಲಿಗೆ ಹೋದ ಸ್ವಲ್ಪ ಸಮಯದಲ್ಲೇ ಆ ದ್ವೀಪಗಳ ಸರ್ಕಾರೀ ನೌಕರರ ಹಾಗೂ ಕೈಗಾರಿಕಾ ಕಾರ್ಮಿಕರ ಟ್ರೇಡ್ ಯೂನಿಯನ್ ಚಳವಳಿಗಳು ಉತ್ತೇಜಿತಗೊಂಡವು. ಅಲ್ಲಿ ಕಾ. ಪ್ರಸಾದರು 1966 ರಲ್ಲಿ 'ಅಂಡಮಾನ್ ಮತ್ತು ನಿಕೋಬಾರ್ ಸರ್ಕಾರಿ ನೌಕರರ ಹಾಗೂ ಕಾರ್ಮಿಕರ ಫೆಡರೇಶನ್' ಅನ್ನು ಸ್ಥಾಪಿಸಿದರು. ಕೊನೆಯವರೆಗೂ ಅವರು ಅದರ ಅಧ್ಯಕ್ಷರಾಗಿದ್ದರು.

1980 ರಲ್ಲಿ ಕಾ. ಪ್ರಸಾದ್ ಅವರು ಸಿ. ಪಿ. ಐ. (ಎಂ) ಅಭ್ಯರ್ಥಿಯಾಗಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಿಂದ ಲೋಕಸಭೆಗೆ ಸ್ಪರ್ಧಿಸಿದ್ದರು.

ದಾಂಡೇಲಿ :

ಪ್ಲೈವುಡ್ ಕಾರ್ಮಿಕರಿಗೆ ಬೆಂಬಲ

ಸಾರ್ವತ್ರಿಕ ವಿಧಾನಸಭಾ ಚುನಾವಣೆ ಮತದಾನದ ದಿನವಾದ ಜನವರಿ 5ನ್ನು ಪ್ಲಾಯ್‌ವುಡ್ ಆಡಳಿತ ವರ್ಗವು ಪಗಾರ ಸಹಿತ ರಜೆಯೆಂದು ಘೋಷಿಸುವ ಬದಲಾಗಿ ಬದಲಿ ರಜೆಯೆಂದು ಘೋಷಿಸಿತ್ತು. ಅದನ್ನು ಪ್ರತಿಭಟಿಸಿ ದಿ ಇಂಡಿಯನ್ ಪ್ಲಾಯವುಡ್ ಕಾರ್ಮಿಕ ಸಂಘವು ಆಡಳಿತ ವರ್ಗವು ಜನವರಿ 5 ನ್ನು ಪಗಾರ ಸಹಿತ ರಜೆ ಎಂದು ಘೋಷಿಸಲು ಒತ್ತಾಯಿಸಿ ನೋಟಿಸನ್ನು ಕೊಟ್ಟಿತ್ತು ಅದರ ಪ್ರತಿಗಳನ್ನು ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೂ ಸರಕಾರಕ್ಕೂ ಕಳಿಸಲಾಗಿತ್ತು. ಇದನ್ನು ಅನುಲಕ್ಷಿಸಿ ಪ್ಲಾಯವುಡ್ ಆಡಳಿತ ವರ್ಗವು ಜನವರಿ 5 ನ್ನು ಪಗಾರ ಸಹಿತ ರಜೆ ಎಂದು ತಾ. 6–2–83 ರಂದು ಘೋಷಿಸಿದೆ ಇದನ್ನು ಸಂಘವು ಸ್ವಾಗತಿಸುತ್ತದೆ.

ಅಷ್ಟೇ ಅಲ್ಲದೆ ದಾಂಡೇಲಿಯ ಪ್ಲಾಯವುಡ್ ಕಾರ್ಮಿಕರು ಸಿ. ಐ. ಟಿ. ಯು ನೇತೃತ್ವದ ಪ್ಲಾಯವುಡ್ ವರ್ಕರ್ಸ್ ಯೂನಿಯನ್ ಮಂಡಿಸಿದ ಬೇಡಿಕೆಗಳನ್ನು ಈಡೇರಿಸುವಲ್ಲಿ ಆಡಳಿತ ವರ್ಗವು ಹಿಂದೆ ಬಿದ್ದಿದೆ. ಅದಕ್ಕೆ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಹೋರಾಟದ ಪ್ರಥಮ ಹಂತವಾಗಿ ಇಂದು ಪ್ರಾರಂಭಿಸಿರುವ ಸರತಿಯ ಅನ್ನ ಸತ್ಯಾಗ್ರಹಕ್ಕೆ ಸಂಘವು ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ ಮತ್ತು ಈ ಮೂಲಕ ಆಡಳಿತ ವರ್ಗಕ್ಕೆ ಬೇಗನೆ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸುತ್ತದೆ ಸರಕಾರವೂ ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಕಾರ್ಮಿಕರಿಗೆ ಬೇಗನೆ ಪರಿಹಾರ ಕೊಡಿಸಬೇಕೆಂದು ಪ್ರಕಟನೆಯಲ್ಲಿ ಒತ್ತಾಯಿಸಲಾಗಿದೆ.

ದಾಂಡೇಲಿ :

ಪ್ಲೈವುಡ್ ಕಾರ್ಮಿಕರಿಂದ ಉಪವಾಸ ಸತ್ಯಾಗ್ರಹ

ತಾರೀಖು 2–2–1983 ರಂದು ಪ್ಲಾಯ್‌ವುಡ್‌ವರ್ಕರ್ಸ್‌ಯೂನಿಯನ್‌ನಿಂದ ಪ್ಲಾಯವುಡ್ ಆಡಳಿತ ವರ್ಗಕ್ಕೆ 5 ಅಂಶಗಳ ಸಾಮಾನ್ಯ ಬೇಡಿಕೆ ಪಟ್ಟಿಯನ್ನು ಸಲ್ಲಿಸಿತ್ತು. ಅಲ್ಲದೇ ಒಂದು ವಾರದಲ್ಲಿ ಆಡಳಿತ ವರ್ಗವು ಸರಿಯಾದ ಒಪ್ಪಂದಕ್ಕೆ ಬರದಿದ್ದಲ್ಲಿ ಕಾರ್ಮಿಕರು "ಸರತಿಯ ಅನ್ನ ಸತ್ಯಾಗ್ರಹ"ವನ್ನು ಹೋರಾಟದ ಮೊದಲ ಹಂತವಾಗಿ ಪ್ರಾರಂಭಿಸುವದಾಗಿ ಸಹ ತಿಳಿಸಿದ್ದರು. ಆದರೆ ಆಡಳಿತ ವರ್ಗದಿಂದ ಈ ನೋಟಿಸಿಗೆ ಯಾವುದೇ ಉತ್ತರ ಸಹ ಬರಲಿಲ್ಲ. ಆದ್ದರಿಂದ ಕಾರ್ಮಿಕರು ತಮ್ಮ ನಿರ್ಧಾರದಂತೆ ತಾರೀಖು 9-2-1983 ರಂದು ಮುಂಜಾನೆ 7-15ಕ್ಕೆ ಶ್ರೀ ರಾಮಯ್ಯ ಹಾಗೂ ಶ್ರೀ ವಿಸುರತ್ನಂ ಇವರಿಂದ 24 ಘಂಟೆಗಳ ಅನ್ನ ಸತ್ಯಾಗ್ರಹವನ್ನು ಮತ್ತು ತಾ|| 10-2-83 ರಂದು ಶ್ರೀ ಪಿ. ಚನ್ನಯ್ಯ ಹಾಗೂ ಶ್ರೀ ಕೆ. ಶಿಖಾಮಣಿ ಪ್ರಾರಂಭಿಸಿದ್ದಾರೆ.

ಕಾರ್ಮಿಕರ ಬೇಡಿಕೆಗಳು ಈ ರೀತಿ ಇವೆ:

1) 1981 ರ ಐತಿಹಾಸಿಕ ಹೋರಾಟದಲ್ಲಿ ಕಾರ್ಮಿಕರ ಮೇಲೆ ಹಾಕಲಾಗಿದ್ದ ಎಲ್ಲ ಪೋಲಿಸ್ ಕೇಸುಗಳನ್ನು ವಾಪಸ್ ತೆಗೆದುಕೊಳ್ಳಬೇಕು. (ಮಾಲೀಕರಿಂದ ಹಾಗೂ ಮಾಲೀಕರ ಪ್ರೇರಣೆಯಿಂದ ಹಾಕಲಾದ ಎಲ್ಲ ಕೇಸುಗಳು).

2) ಇದೇ ಹೋರಾಟದಲ್ಲಿ ಅಕ್ರಮವಾಗಿ ಕೆಲಸದಿಂದ ವಜಾ ಮಾಡಲ್ಪಟ್ಟ ಎಲ್ಲ ಕೆಲಸಗಾರರನ್ನು ಕೆಲಸಕ್ಕೆ ವಾಪಸ್ ತೆಗೆದುಕೊಳ್ಳಬೇಕು.

3) ನಮ್ಮ ಯೂನಿಯನ್‌ಗೆ ಮಾನ್ಯತೆ ನೀಡಬೇಕು. (Recognisation)

4) 1981–82 ನೇ ಸಾಲಿನ ಬೋನಸ್ ಬಗ್ಗೆ ನಮ್ಮ ಸಂಘದ ಜತೆ ಸೂಕ್ತ ಒಪ್ಪಂದಕ್ಕೆ ಬರಬೇಕು.

5) ಕಾರ್ಮಿಕರಿಗೆ ಆಡಳಿತ ವರ್ಗದಿಂದ ಆಗುತ್ತಿರುವ ಕಿರುಕುಳ ತೊಂದರೆ ಕೂಡಲೇ ನಿಲ್ಲಬೇಕು.

ಈ ಪ್ರಕಟಣೆಯನ್ನು ಕಾರ್ಯದರ್ಶಿ ಶ್ರೀ ಎಂ. ಬಿ. ಕಟ್ಟಿಯವರು ನೀಡಿದ್ದಾರೆ.

ತ್ರಿಪುರಾ ಜನತೆಯ ತೀರ್ಪಿನ ಮಹತ್ವ

(3ನೇ ಪುಟದಿಂದ)

ಹೊಂದಿದ ಟಿ.ಯು.ಜೆ.ಎಸ್. ತೀವ್ರಗಾಮಿಗಳು ದಶರಥ್‌ದೇಬ್‌ರವರನ್ನು ಕೊಲ್ಲಲು ಸತತ ಯತ್ನ ನಡೆಸಿದರು. ಯಾಕೆಂದರೆ ಅವರು ಈಗ ಸಮರಶೀಲ ಬುಡಕಟ್ಟು ಜನರ ಹಾಗೂ ಬಂಗಾಲಿಗಳ ಐಕ್ಯತೆಯ ಪ್ರತೀಕವಾಗಿದ್ದಾರೆ. ಇಂತಹ ಮೊದಲ ಆಕ್ರಮಣ ಪ್ರಧಾನ ಮಂತ್ರಿಯವರು ರಾಜ್ಯಕ್ಕೆ ಬರುವ ಮೊದಲು ಹಾಗೂ ಎರಡನೇ ಆಕ್ರಮಣ ಅವರು ರಾಜ್ಯದಲ್ಲಿ ಪ್ರಚಾರ ಕಾರ್ಯದಲ್ಲಿರುವಾಗಲೇ ನಡೆದರೂ ಈ ಅಮಾನುಷ ದಾಳಿಯನ್ನು ಖಂಡಿಸುವ ಒಂದು ಮಾತೂ ಅವರಿಂದ ಬರಲಿಲ್ಲ. ಬದಲಾಗಿ ತ್ರಿಪುರಾದಲ್ಲಿನ ತೀವ್ರವಾದಕ್ಕೆ ಸಿ. ಪಿ. ಐ. (ಎಂ) ಮೂಲ ಎಂದು ಆಪಾದಿಸಿದರು. ಟಿ. ಯು. ಜೆ.ಎಸ್. ತೀವ್ರವಾದಿಗಳುಆರಂಭಿಸಿದ ಕೊಲೆ ಆಂದೋಲನಕ್ಕೆ ಆಕೆ ಆಶೀರ್ವಾದ ನೀಡುತ್ತಿದ್ದರೆಂಬುದು ಇದರಿಂದ ಸ್ಪಷ್ಟ.

ಈ ದಾಳಿಯನ್ನು ರಾಜಕೀಯವಾಗಿಯೂ ಸಂಘಟನಾತ್ಮಕವಾಗಿಯೂ ಹಿಮ್ಮೆಟ್ಟಿಸಲಾಯಿತು ಎಂಬುದರ ಯಶಸ್ಸು ಎಡರಂಗ ಹಾಗೂ ಅದರ ಸರ್ಕಾರಕ್ಕೆ ಸಲ್ಲಬೇಕು. ಜೂನ್ 1980ರ ದಂಗೆ ಎಡರಂಗಕ್ಕೆ ಹಾಗೂ ಸರಕಾರಕ್ಕೆ ಗಂಭೀರ ಸಮಸ್ಯೆಗಳನ್ನೊಡ್ಡಿದ್ದೇನೋ ನಿಜ. ಆದರೆ ಅದನ್ನು ಚಾಕಚಕ್ಯತೆಯಿಂದ ನಿರ್ವಹಿಸಲಾಯಿತು. ಚುನಾವಣಾ ಪೂರ್ವ ದಾಳಿಗಳ ಸಂದರ್ಭದಲ್ಲೂ ಎಡರಂಗದ ನಾಯಕರು ಉದ್ವೇಗಗೊಳ್ಳದೆ ಜನರೊಂದಿಗಿದ್ದು ಅತ್ಯಂತ ದುರ್ಭರ ಪ್ರಸಂಗ ಎದುರಿಸುವಲ್ಲಿ ಅವರಿಗೆ ಧೈರ್ಯ ಹಾಗೂ ಭರವಸೆ ತುಂಬಿದರು. ಆದ್ದರಿಂದಲೇ ಮತದಾನದ ನಂತರ ವಿಶೇಷವಾಗಿ ಮತ ಎಣಿಕೆಯ ಸಮಯದಲ್ಲಿ ಹೊಸದಾಳಿಗಳು ಆರಂಭವಾದರೂ ಮತದಾನ ಶಾಂತಿಯುತವಾಗಿತ್ತು. ನನಗೆ ತಿಳಿದು ಬಂದ ವಿಷಯಗಳಿಂದ ಕಂಡುಬರುವುದೇನೆಂದರೆ ಪಶ್ಚಿಮ ಬಂಗಾಲದಲ್ಲಿ ಒಂದು ದಶಕದ ಹಿಂದೆ ನಡೆಸಿದ್ದನ್ನು ಪುನರಾವರ್ತಿಸಲು ತ್ರಿಪುರಾದಲ್ಲಿ ಮತದಾನದ ನಂತರ ಪ್ರಯತ್ನಿಸಲಾಯಿತು.

ನಾನು ಈಗಾಗಲೇ ತಿಳಿಸಿರುವ ಪೂರ್ವ ಕಮಾಂಡಿನ ಜನರಲ್ ವೈದ್ಯರ ಖಂಡನಾರ್ಹ ಹೇಳಿಕೆ ಇದರ ಒಂದು ಸೂಚನೆ. ಈ ಸೈನ್ಯಾಧಿಕಾರಿಯ ವರ್ತನೆಯ ವಿರುದ್ಧ ದೇಶವ್ಯಂತ ಪ್ರತಿಭಟನೆಯ ದನಿ ಎತ್ತಿದುದರ ಕೀರ್ತಿ ಸಮಸ್ತ ವಿರೋಧ ಪಕ್ಷಗಳಿಗೆ ಸಲ್ಲಬೇಕು. ತ್ರಿಪುರಾದಲ್ಲೂ ಪ್ರಜಾಪ್ರಭುತ್ವವಾದೀ ಸಾರ್ವಜನಿಕ ಅಭಿಪ್ರಾಯ ಜಾಗರೂಕವಾದ್ದರಿಂದ ಪಶ್ಚಿಮಬಂಗಾಳಗಳಲ್ಲಿ 1971-72ರಲ್ಲಿ ನಡೆಸಿದುದರ ಪುನರಾವರ್ತನೆ ತ್ರಿಪುರಾದಲ್ಲಿ ಸಾಧ್ಯವಾಗಲಿಲ್ಲ.

ವೈರಿಗಳ ಸೋಲು

ಈ ಹಿನ್ನಲೆಯಲ್ಲಿ ಜನವರಿ 5ರ ಮತದಾನದ ಫಲಿತಾಂಶವನ್ನು ಪರಿಶೀಲಿಸಬೇಕು. ಬುಡಕಟ್ಟು ಜನರನ್ನು ಎಡರಂಗದ ವಿರುದ್ಧ ತಿರುಗಿಸುವ ನಮ್ಮ ವೈರಿಗಳ ಉದ್ದೇಶ ವಿಫಲಗೊಂಡಿದೆ. ಬಂಗಾಲಿಗಳ ನಡುವೆಯೂ ಅದನ್ನು ಸಾಧಿಸಲು ಅವರಿಗೆ ಸಾಧ್ಯವಾಗಲಿಲ್ಲ ಎಂಬುದು ಈ ಕೆಳಗಿನ ಅಂಶಗಳಿಂದ ತಿಳಿದು ಬರುತ್ತದೆ.

1. ಬುಡಕಟ್ಟು ಜನರಿಗೆ ಮೀಸಲಿರಿಸಿದ 17 ರಲ್ಲಿ ಬಹುಸಂಖ್ಯೆಯ ಅಂದರೆ 9 ಸ್ಥಾನಗಳನ್ನು ಎಡರಂಗ ಗಳಿಸಿದೆ.
2. ಎಡರಂಗ ಗೆದ್ದ ಇಂತಹ ಸ್ಥಾನಗಳಲ್ಲೆಲ್ಲಾ ಗೆಲುವಿನ ಅಂತರ ಗಣನೀಯವಾಗಿತ್ತು. ಎರಡು ಕೊಲೆ ಪ್ರಯತ್ನಗಳ ಗುರಿಯಾಗಿದ್ದ ದಶರಥ್ ದೇಬ್ ಹತ್ತು ಸಾವಿರ ಮತ ಹೆಚ್ಚು ಪಡೆದರು. ಅವರ ಎಲ್ಲಾ ವಿರೋಧಿಗಳೂ ಠೇವಣಿ ಕಳಕೊಂಡರು.
3. ಇತರ ಸ್ಥಾನಗಳಲ್ಲೂ ಎಡೆಗಂಗ ಗೆದ್ದ ಹೆಚ್ಚಿನಕಡೆ ಗೆಲುವಿನ ಅಂತರ ಗಣನೀಯವಾಗಿತ್ತು. 12,736 ಮತಗಳ ಅಂತರದಿಂದ ಗೆದ್ದ ಎಡರಂಗ ಅಭ್ಯರ್ಥಿ ಕೈಗಾರಿಕಾ ಮಂತ್ರಿ ಅನಿಲ್ ಸರ್ಕಾರ್ ರಾಜ್ಯದಲ್ಲಿ ಅತ್ಯಂತ ಹೆಚ್ಚು ಅಂತರದಿಂದ ಗೆದ್ದ ಅಭ್ಯರ್ಥಿ.
4. ಇಂತಹ ಯಾವ ದಾಖಲೆಗಳನ್ನೂ ಟಿ. ಯು. ಜೆ. ಎಸ್. ಅಥವಾ ಕಾಂಗ್ರೆಸ್ (ಐ) ಅಭ್ಯರ್ಥಿಗಳು ನಿರ್ಮಿಸಲಿಲ್ಲ.

ಈ ಲೇಖನ ಕೊನೆಗೊಳಿಸುವ ಮೊದಲು ಇನ್ನೊಂದು ಅಂಶದ ಬಗ್ಗೆ ಗಮನ ಹರಿಸೋಣ. ಕಾಂಗ್ರೆಸ್ (ಐ) ಹಾಗೂ ಬೂರ್ಜ್ವಾ ವಿರೋಧಪಕ್ಷಗಳಂತಲ್ಲದೆ ತ್ರಿಪುರಾದ ಎಡರಂಗ, ಪಶ್ಚಿಮ ಬಂಗಾಲದ ಎಡರಂಗದಂತೆ ರಾಜ್ಯದ ಪ್ರಜಾಪ್ರಭುತ್ವವಾದಿಗಳು ತಮ್ಮ ತಮ್ಮೊಳಗೆ ಹೇಗೆ ಒಂದಾಗಬೇಕು ಮತ್ತು ಹೇಗೆ ದೇಶದ ಪ್ರಜಾಪ್ರಭುತ್ವವಾದೀ ಆಂದೋಲನದೊಂದಿಗೆ ಒಂದಾಗಬೇಕೆಂಬುದರ ಸ್ಪಷ್ಟ ಕಲ್ಪನೆ ಹೊಂದಿತ್ತು. ಎಡರಂಗ ಸರಕಾರದ ಮೊದಲ ಐದು ವರ್ಷಗಳ ಕಾರ್ಯನಿರ್ವಹಣೆ ಈ ಸ್ಪಷ್ಟ ಕಲ್ಪನೆ ಹಾಗೂ ಕಾರ್ಯಕ್ರಮವನ್ನು ಆಧರಿಸಿತ್ತು.

ರಾಜ್ಯದ ಎರಡು ಜನಾಂಗೀಯ ಗುಂಪುಗಳ ನಡುವಿನ ಸಂಬಂಧದ ವಿಷಯದ ಗಂಭೀರ ಪ್ರಶ್ನೆಗೆ ಪರಿಹಾರವಾಗಿ ಸ್ವಯಮಾಡಳಿತ ಜಿಲ್ಲಾ ಸಮಿತಿಯ ರಚನೆ, ಬುಡಕಟ್ಟು ಭಾಷೆಯಾದ ಕಾಕ್‌ಬರೋಕ್‌ಗೆ ಶಾಲೆಗಳಲ್ಲಿ ಸ್ಥಾನ ಕೊಡಿಸಿದ್ದು, ಸರ್ಕಾರೀ ಸೇವೆಯಲ್ಲಿ ಬುಡಕಟ್ಟು ಜನರ ಸೇರ್ಪಡೆ, ಬುಡಕಟ್ಟು ಜನರ ಜಮೀನನ್ನು ಇತರರಲ್ಲಿನ ಬಡ ಹಿಡುವಳಿದಾರರಿಗೆ ತೊಂದರೆಯಾಗದಂತೆ ಮತ್ತೆ ಅವರಿಗೆ ಸಿಗುವಂತೆ ಮಾಡಿದ್ದು, ಇತ್ಯಾದಿ ಪ್ರಮುಖ ಪ್ರಜಾಪ್ರಭುತ್ವವಾದೀ ಸುಧಾರಣೆಗಳನ್ನು ಎಡರಂಗ ಜಾರಿಗೆ ತಂದಿತು. ಬುಡಕಟ್ಟು ಜನರು ಹಾಗೂ ಇತರರ ನಡುವಣ ಸಂಬಂಧಗಳಲ್ಲಿ ಪ್ರಜಾಪ್ರಭುತ್ವವಾದೀ ಬದಲಾವಣೆ ತರುವ ಈ ನಿರ್ದಿಷ್ಟಕ್ರಮಗಳ ಜೊತೆಗೆ ಎಡರಂಗ ಮಂತ್ರಿಮಂಡಲ ಒದಗಿಸಿದ ಸ್ವಚ್ಛ ಹಾಗೂ ದಕ್ಷ ಆಡಳಿತ ಅದನ್ನು ಬುಡಕಟ್ಟು ಜನರು ಹಾಗೂ ಇತರರು ಹೀಗೆ ಎಲ್ಲರ ಪ್ರೀತಿಪಾತ್ರಗಳಿಸಿತು.

ಇದೇ ತ್ರಿಪುರಾದ ಚುನಾವಣಾ ತೀರ್ಪಿಗೂ, ಆಂಧ್ರಪ್ರದೇಶ ಹಾಗೂ ಕರ್ನಾಟಕ ಚುನಾವಣಾ ತೀರ್ಪಿಗೂ ಇರುವ ವ್ಯತ್ಯಾಸ. ಆಂಧ್ರಪ್ರದೇಶ ಹಾಗೂ ಕರ್ನಾಟಕದಲ್ಲಿ ಮತದಾರರು ಭ್ರಷ್ಟ ಹಾಗೂ ಅದಕ್ಷ ಕಾಂಗ್ರೆಸ್-ಐ ಮಂತ್ರಿಗಳ ವಿರುದ್ಧ ತಮ್ಮ ಬೇಸರ ಹಾಗೂ ಸಿಟ್ಟನ್ನು ತೋರ್ಪಡಿಸಿ ಇಂತಹ ತಪ್ಪುಗಳನ್ನು ಮಾಡಲಾರರು ಎಂಬ ನಿರೀಕ್ಷೆಯಿಂದ ಹೊಸ ರಾಜಕೀಯ ಪಕ್ಷವನ್ನು ಅಥವಾ ಪಕ್ಷಗಳ ಕೂಟವನ್ನು ಅಧಿಕಾರಕ್ಕೆ ತರಲು ಪ್ರಯತ್ನಿಸಿದರೆ, ತ್ರಿಪುರಾದ ಮತದಾರರು ಎಡರಂಗ ಹಿಂದೆ ವಿರೋಧ ಪಕ್ಷವಾಗಿದ್ದಾಗ ಹೇಗೆ ವರ್ತಿಸಿತು, ಅಧಿಕಾರ ವಹಿಸಿಕೊಂಡ ಮೇಲೆ ಹೇಗೆ ವರ್ತಿಸಿರು ಎಂಬುದನ್ನು ಕಣ್ಣಾರೆ ಕಂಡಿದ್ದಾರೆ.

ಬೇರೆ ಮಾತಲ್ಲಿ ಹೇಳುವುದಾದರೆ, ಆಂಧ್ರಪ್ರದೇಶ ಹಾಗೂ ಕರ್ನಾಟಕದಲ್ಲಿ ತೀರ್ಪು **ಕಾಂಗ್ರೆಸ್ (ಐ) ಹಾಗೂ ಅದರ ಧೋರಣೆಗಳ ವಿರುದ್ಧವಾಗಿದ್ದರೆ,** ತ್ರಿಪುರಾದಲ್ಲಿ ಅದು **ಎಡರಂಗ ಹಾಗೂ ಅದರ ಧೋರಣೆಗಳ ಪರವಾಗಿತ್ತು.**

ರೈತ ಸಂಘದಿಂದ ಸಾಂಸ್ಕೃತಿಕ ಕಾರ್ಯಕ್ರಮ

ದಿನಾಂಕ 11-2-83 ರಂದು ತುಮಕೂರು ಜಿಲ್ಲೆಯ ಊರುಕೆರೆ ಗ್ರಾಮದಲ್ಲಿ ರೈತ-ಕೃಷಿ ಕೂಲಿಕಾರರ ಮತ್ತು ಕಾರ್ಮಿಕರ ಸಂಘದ ಆಶ್ರಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತೆಂದು ಸಂಘದ ಪ್ರಕಟನೆಯಲ್ಲಿ ತಿಳಿಸಲಾಗಿದೆ. ಕಾರ್ಯಕ್ರಮದಲ್ಲಿ ಸಂಘದ ಮಹಿಳಾ ಸದಸ್ಯೆಯರ ತಂಡದಿಂದ ಜಾನಪದ ಗೀತೆ ಮತ್ತು ನಾಡಪದಗಳು ಒಳಗೊಂಡಿದ್ದವೆಂದು ವರದಿಯಾಗಿದೆ.

ಸೈನ್ಯದಲ್ಲಿ ಬಂಡಾಯ

(6ನೇ ಪುಟದಿಂದ)

ಅಕ್ಕಪಕ್ಕದ ಸಂಸ್ಥಾನಗಳ ಅರಸರು ಇಂಗ್ಲಿಷರ ಪರವಾಗಿದ್ದಾರೆಂದು ಹೇಳಲಾಗಿದೆ. ಸಿಲೋನ್ ಮಾರ್ಗವಾಗಿ ಚೀಣಾಕ್ಕೆ ತೆರಳಲಿದ್ದ ಲಾರ್ಡ್ ಎಲ್ಗಿನ್ ಹಾಗೂ ಜನರಲ್ ಆಷ್‌ಬರ್ನ್ ಹ್ಯಾಮ್‌ರ ಸೈನ್ಯದಳಗಳನ್ನು ಸಿಲೋನ್‌ನಲ್ಲೇ ಇರಿಸಿರಬೇಕೆಂದು ಪತ್ರಗಳನ್ನು ಕಳುಹಿಸಲಾಗಿದೆ; ಕೊನೆಯದಾಗಿ, ಇನ್ನು ಹದಿನೈದು ದಿನಗಳಲ್ಲಿ 14,000 ಬ್ರಿಟಿಷ್ ಸೈನಿಕರನ್ನು ಇಂಗ್ಲೆಂಡಿನಿಂದ ಭಾರತಕ್ಕೆ ರವಾನಿಸಲಾಗುವುದು. ಬ್ರಿಟಿಷ್ ದಳಗಳ ಚಲನೆಗಳಿಗೆ ಪ್ರಸ್ತುತದಲ್ಲಿ ಭಾರತದ ಹವಾಗುಣವು ಎಂಥದೇ ಅಡಚಣೆಗಳನ್ನು ಒಡ್ಡಿದರೂ, ಸಾರಿಗೆ ಸೌಲಭ್ಯಗಳ ಕೊರತೆ ಎಷ್ಟೇ ಅಗಾಧವಾಗಿದ್ದರೂ, ದೆಹಲಿಯಲ್ಲಿನ ಬಂಡಾಯಗಾರರು ಯಾವುದೇ ರೀತಿಯ ದೀರ್ಘ ಕಾಲದ ಪ್ರತಿಭಟನೆ ನೀಡದೆಯೇ ಶರಣಾಗುವ ಸಂಭವವೇ ಹೆಚ್ಚೆಂದು ಹೇಳಬಹುದಾಗಿದೆ. ಆದರೂ, ಹಾಗಾದರೂ, ಅದು ಮುಂದೆ ಜರುಗಲಿರುವ ಅತ್ಯಂತ ಭೀಕರ ದುರಂತಕ್ಕೆ ನಾಂದಿಯಷ್ಟೆ ಆಗುವುದು.

ಕಾರ್ಲ್ ಮಾರ್ಕ್ಸ್‌ರವರು 1857ರ ಜೂನ್ 30 ರಂದು ಬರೆದುದು. 'ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್' ಪತ್ರಿಕೆಯ ನಂ. 5065ರಲ್ಲಿ 1857ರ ಜುಲೈ 15 ರಂದು ಸಂಪಾದಕೀಯ ಲೇಖನವಾಗಿ ಪ್ರಕಟವಾಯಿತು.

[ಮಾಸ್ಕೋದ ಪ್ರಗತಿ ಪ್ರಕಾಶನದ ಪ್ರಕಟನೆಯಾದ ಮಾರ್ಕ್ಸ್ ಮತ್ತು ಎಂಗೆಲ್ಸರ 'ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ 1857-1859' ಎಂಬ ಕೃತಿಯಿಂದ ಮೇಲಿನ ಎರಡು ಲೇಖನಗಳನ್ನು ಆರಿಸಲಾಗಿದೆ. ಇದರ ಅನುವಾದಕರು ಕೆ. ಎಲ್. ಗೋಪಾಲಕೃಷ್ಣರಾವ್.]

●

ಡಿ.ವೈ.ಎಫ್.ಐ. ಮಹಿಳಾ ಶಾಖೆಯ ಉದ್ಘಾಟನೆ

17-2-83 ರಂದು ಬೆಂಗಳೂರು ನಗರದ ಬಾಪೂಜಿ ನಗರದಲ್ಲಿ ಮಹಿಳಾ ಶಾಖೆಯನ್ನು ಪ್ರಾರಂಭಿಸಲಾಗಿದೆ. ಮುಖ್ಯ ಅಥಿತಿಯಾಗಿ ಆಗಮಿಸಿದ್ದ ಬೆಂಗಳೂರು ಜಿಲ್ಲಾ ಡಿ.ವೈ.ಎಫ್.ಐ. ಕಾರ್ಯದರ್ಶಿಗಳಾದ ಕಾ. ಎಸ್. ಶಿವರಾಂ ಅವರು ಡಿ.ವೈ.ಎಫ್.ಐ.ನ ಧ್ಯೇಯೋದ್ದೇಶಗಳು, ಕಾರ್ಯಕ್ರಮ, ಸಂವಿಧಾನ ಮತ್ತು ರಾಷ್ಟ್ರದಲ್ಲಿ ನಡೆಯುತ್ತಿರುವ ಮಹಿಳೆಯರ ಮೇಲೆ ಶೋಷಣೆ, ದಬ್ಬಾಳಿಕೆ, ಅತ್ಯಾಚಾರ ಮುಂತಾಗಿ ವಿವರಿಸಿದರು.

ಅಲ್ಲಿನ ಮುಖ್ಯ ಸಂಘಟಕರಾದ ಕಾ. ಸಿ. ರಾಜು ಅವರು ಸ್ವಾಗತಿಸಿದರು. ನಂತರ ಕು. ಸ್ವರ್ಣಾಂಭ ಅವರನ್ನು ಅಧ್ಯಕ್ಷರನ್ನಾಗಿಯೂ, ಸೌಧಾಮಣಿ ಅವರನ್ನು ಕಾರ್ಯದರ್ಶಿಯನ್ನಾಗಿಯೂ, ಸಮಿತಿಯ ಸದಸ್ಯರುಗಳನ್ನಾಗಿ ವೈ. ಎಂ. ರಮ, ಶಾಂತಮ್ಮ, ಸುಕನ್ಯ, ಅನಸೂಯ, ಸರೋಜ, ಭಾಗ್ಯಲಕ್ಷ್ಮಿ, ಯಶೋದಮ್ಮ, ಪ್ರಮೀಳ ಅವರನ್ನೊಳಗೊಂಡ ಹತ್ತು ಸದಸ್ಯರ ಶಾಖೆಯನ್ನು ಆಯ್ಕೆ ಮಾಡಲಾಯಿತು.

ಡಿ. ವೈ. ಎಫ್. ಐ. ಆಶ್ರಯದಲ್ಲಿ ವಾಲಿಬಾಲ್ ಟೂರ್ನಿ

ಕುಂದಾಪುರ — ಇಲ್ಲಿಯ ಕೋಣಿ ಗ್ರಾಮದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ., ಕೋಣಿ) ಘಟಕದ 7ನೇ ವಾರ್ಷಿಕೋತ್ಸವದ ಅಂಗವಾಗಿ ಕುಂದಾಪುರ ತಾಲೂಕು ಮಟ್ಟದ ವಾಲಿಬಾಲ್ ಪಂದ್ಯಾಟವನ್ನು ಕೋಣಿ ಪಂಚಾಯತ್ ಕಚೇರಿ ವಠಾರದಲ್ಲಿ ಫೆಬ್ರವರಿ 27 ರಂದು ನಡೆಸಲಿದೆ. ಪ್ರವೇಶ ಪತ್ರಗಳನ್ನು ಫೆಬ್ರವರಿ 25 ರೊಳಗೆ ಶ್ರೀ ಕೆ. ನಾರಾಯಣ ಆಚಾರ್, ಕಾರ್ಯದರ್ಶಿ, ಡಿ.ವೈ.ಎಫ್.ಐ., ಕೋಣಿ ಘಟಕ, ಕೋಣಿ ಪೋಸ್ಟ್, ಕುಂದಾಪುರ ತಾಲೂಕು, ದ. ಕ. 476 255 ಇವರಲ್ಲಿಗೆ ಕಳುಹಿಸಬೇಕು ಎಂಬುದಾಗಿ ಪ್ರಕಟನೆಯಲ್ಲಿ ಕೋರಲಾಗಿದೆ.

ಅಸ್ಸಾಂ ಮತದಾರರ ಮುಂದಿರುವ ಪ್ರಶ್ನೆಗಳು

(ಒಂದನೇ ಪುಟದಿಂದ)

ಡನೆ ಸೇರಿ ತನ್ನ ಸ್ವಾರ್ಥ ಸಾಧಿಸಿಕೊಳ್ಳಲು ಕಾಂಗ್ರೆಸ್ ಪಕ್ಷ ಮತ್ತು ಇಂದಿರಾಗಾಂಧಿ ಪ್ರಯತ್ನ ಮಾಡಿದ್ದಾರೆ. ಅಸ್ಸಾಂನಲ್ಲಿ ಚುನಾವಣೆ ಮಾಡದೆ ಅಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತೆಯನ್ನು ಮುಂದುವರಿಸುವ ಸಲುವಾಗಿ ಸಂವಿಧಾನದಲ್ಲಿ ತಿದ್ದುಪಡಿ ತರಲು ಪ್ರಯತ್ನ ಮಾಡಿದರು. ಅಸ್ಸಾಂಮಿನಂಥ ಸಮಸ್ಯೆಗಳನ್ನು ನ್ಯಾಯವಾಗಿ ಪರಿಹರಿಸದೆ, ಆ ಪ್ರದೇಶದ ತ್ರಿಪುರ ಮತ್ತಿನ್ನಿತರ ರಾಜ್ಯಗಳಲ್ಲಿ ಕೂಡ, ಛಿದ್ರಕಾರಿ ಶಕ್ತಿಗಳೊಡನೆ ಸೇರಿಕೊಂಡಿದ್ದಾರೆ. ವಿದೇಶಿಯರನ್ನು ಹೊರಗೆ ಹಾಕುವ ಚಳುವಳಿಗೂ ಬೆಂಬಲ ತೋರಿಸುತ್ತಿದ್ದಾರೆ. ಕೇಂದ್ರದ ಈ ರೀತಿಯ ಪ್ರಜಾಪ್ರಭುತ್ವ ವಿರೋಧಿ ಧೋರಣೆಯಿಂದಾಗಿ ಅಸ್ಸಾಂ ಮತ್ತಿತರ ಪ್ರದೇಶಗಳಲ್ಲಿ ಗೊಂದಲಮಯ ಪರಿಸ್ಥಿತಿ ಉಂಟಾಗಿದೆ. ಆಳುವ ಪಕ್ಷದ ಇಂಥ ನೀತಿಯ ವಿರುದ್ಧ ಹೋರಾಡುವ ಪಣತೊಟ್ಟಿದೆ ಆರು ಪಕ್ಷಗಳ ರಂಗ.

Printed & Published by P. Ramachandra Rao by him on behalf of the Communist Party of India (Marxixt) Karnataka State Committee L-56 K. V. Temple Street Sultanpet, Bangalore 560 053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited, 54/1, K. R. Road, Bangalore-4 Editor : P. RAMACHANDRA RAO